## 95

# “ನಿಮಗೆ ಮನವರಿಕೆ ಮಾಡಬಹುದಾದ ವಿಧಾನ ಯಾವದು?”

### ಓದುವ ಮನೆಪಾಠ #43

VIII. ಯೇಸುವಿನ ಪುನರುತ್ಥಾನ, ಕಾಣಿಸುವಿಕೆ, ಆರೋಹಣ (ಮುಂದುವರೆಯುವದು).
- A. ಭಾನುವಾರ: ಪುನರುತ್ಥಾನ ಹೊಂದಿದ ದಿವಸ (ಮುಂದುವರೆಯುವದು).
  - 7. ಐದನೆಯ ಬಾರಿ:[1] ಅಪೊಸ್ತಲರಿಗೆ (ತೋಮನ ಹೊರತು ಪಡಿಸಿ) (ಮಾರ್ಕ 16:14; ಲೂಕ 24:36-43; ಯೋಹಾನ 20:19-25).
- B. ನಲ್ವತ್ತು ದಿವಸಗಳು (ನೋಡಿ ಅಪೊಸ್ತಲರ ಕೃತ್ಯಗಳು 1:3).
  - 1. ಆರನೆಯ ಬಾರಿ: ಅಪೊಸ್ತಲರಿಗೆ (ತೋಮನಿಗೂ) ವಾರದ ನಂತರದಿಂದ ಯೂದನು (ಯೋಹಾನ 20:26-31; 1 ಕೊರಿಂಥ 15:5).
  - 2. ಏಳನೆಯ ಸಾರಿ: ನಲ್ವತ್ತು ದಿನಗಳ ಅಂತರದಲ್ಲಿ, ಏಳು ಶಿಷ್ಯರಿಗೆ (ಯೋಹಾನ 21:1-24).

### ಪೀಠಿಕೆ

ಅಪೊಸ್ತಲರ ಕೃತ್ಯವನ್ನು ಬರೆದ ಲೂಕನು, “[ಕ್ರಿಸ್ತನು] ಆಯ್ಕೆ ಮಾಡಿದ ಅಪೊಸ್ತಲರು” ಎಂದಿರುವನು (ಅಪೊಸ್ತಲರ ಕೃತ್ಯಗಳು 1:2). “ಇವರಿಗೆ [ಯೇಸು] ಜೀವಿತನಾಗಿ ಕಾಣಿಸಿಕೊಂಡನು. ಆತನು ಬಾಧೆಪಟ್ಟು ಸತ್ತಮೇಲೆ ತನ್ನನ್ನು ಜೀವಂತನೆಂದು ಅನೇಕ ಪ್ರಮಾಣಗಳಿಂದ ಅಪೊಸ್ತಲರಿಗೆ ತೋರಿಸಿಕೊಂಡನು. ನಲ್ವತ್ತು ದಿವಸಗಳ[2] ತನಕ ಅವರಿಗೆ ಕಾಣಿಸಿಕೊಳ್ಳುತ್ತಾ ದೇವರ ರಾಜ್ಯದ ವಿಷಯವಾದ ಸಂಗತಿಗಳನ್ನು ಹೇಳುತ್ತಾ ಇದ್ದನು” (ಅಪೊಸ್ತಲರ ಕೃತ್ಯಗಳು 1:3). ಏಕೆ ನಲ್ವತ್ತು ದಿವಸ? ತಾನು ಏರಿ ಹೋಗುವ ಮೊದಲು ಅವರಿಗೆ ಇನ್ನೂ ಅಧಿಕವಾದ ಸಲಹೆ ಸೂಚನೆಗಳನ್ನು ನೀಡಲು ಈ ದಿವಸಗಳನ್ನು ಬಳಸಿಕೊಂಡನು. ಆತನು ಜೀವಿತನಾಗಿ ಎದ್ದಿರುವದನ್ನು ನಿರೂಪಿಸಲು ಇಷ್ಟು ದಿವಸಗಳ ಅಗತ್ಯವಿತ್ತು. ಅವರಲ್ಲಿ ಯಾವದೇ ಸಂದೇಹವು ಇರಬಾರದೆಂದು ಬಯಸಿದನು.

ಅಂತಿಮವಾದ ನಲ್ವತ್ತು ದಿವಸಗಳಲ್ಲಿ, ಪ್ರಾಯಶಃ ಅನೇಕ ಸಾರಿ ಅವರಿಗೆ ಕಾಣಿಸಿಕೊಂಡಿರಬಹುದು. ಅವರಿಗೆ ಕಾಣಿಸಿಕೊಂಡ ಹತ್ತು ದಾಖಲೆಗಳಿವೆ, ಅದರಲ್ಲಿ ಆತನು ಎದ್ದ ದಿನದ ಬಗ್ಗೆ ಐದು ದಾಖಲೆಗಳಿವೆ. ಈಗಾಗಲೇ ಅದರಲ್ಲಿ ನಾಲ್ಕನ್ನು ಚರ್ಚಿಸಿದ್ದೇವೆ: ಆತನು ಮರಿಯಳಿಗೆ, ಇತರೆ ಮಹಿಳೆಯರಿಗೆ, ಪೇತ್ರನಿಗೆ, ಹಾಗೂ ಎಮ್ಮಾಹು ಹಳ್ಳಿಗೆ ಹೋಗುತ್ತಿದ್ದ ಇಬ್ಬರು ಶಿಷ್ಯರಿಗೆ ಕಾಣಿಸಿಕೊಂಡವುಗಳಾಗಿವೆ.[3] ಆತನು ಪುನರುತ್ಥಾನ ಹೊಂದಿದ ದಿನದಲ್ಲಿ ಐದನೆಯದಾಗಿ ಕಾಣಿಸಿಕೊಂಡ ವಿಚಾರದ ಕುರಿತು ಈಗ ಚರ್ಚಿಸೋಣ. ನಂತರದಲ್ಲಿ ಉಂಟಾದ ಇನ್ನೂ ಎರಡು ತೋರ್ಪಡಿಸುವಿಕೆಯ ಬಗ್ಗೆ ಗಮನಿಸೋಣ. ಈಗಿನ ಮೂರು ತೋರ್ಪಡಿಸುವಿಕೆಗಳು ಅಪೊಸ್ತಲರಿಗೆ ಲಾಭದಾಯಕವಾಗಿವೆ. ಪುನರುತ್ಥಾನದ ಕುರಿತು ಯೇಸು “ಖಚಿತವಾದ ಪುರಾವೆ” ನೀಡಿದನು. ಹನ್ನೊಂದು ಜನರಿಗೆ ಹೇಗೆ ಖಚಿತವಾದ ಮನವರಿಕೆಯಾಯಿತು? ಈ ದಿನಗಳಲ್ಲಿ ನಮಗೆ ಹೇಗೆ ಮನವರಿಕೆಯಾಗುತ್ತದೆ?

## ಹತ್ತು ಅಪೊಸ್ತಲರಿಗೆ ಹೇಗೆ ಮನವರಿಕೆಯಾಯಿತು

## (ಮಾರ್ಕ 16:14; ಲೂಕ 24:36-43; ಯೋಹಾನ 20:19-25)

ಆತನು ಮರಣದಿಂದ ಎದ್ದಿರುವದರ ಕುರಿತು ಯೇಸು ಅಪೊಸ್ತಲರಿಗೆ ಹಂತ ಹಂತವಾಗಿ ಮನವರಿಕೆ ಮಾಡಿದನು. ಮೊದಲನೆಯದಾಗಿ ದೂತನು ಪುನರುತ್ಥಾನದ ಕುರಿತು ಪ್ರಕಟಿಸಿದ ವಾಕ್ಯವು ಉಂಟಾಯಿತು. ನಂತರ ಇತರರು ಈ ವಿಚಾರದಲ್ಲಿ ತಿಳಿಸಿದರೂ, ಅಪೊಸ್ತಲರು ನಂಬಲು ಮುಂದಾಗಲಿಲ್ಲ. ಅಂತಿಮವಾಗಿ, ಯೇಸು ತಾನೇ ಅವರಿಗೆ ತೋರ್ಪಡಿಸಿಕೊಂಡು, ಅವರ ಸಂದೇಹವನ್ನು ಪರಿಹರಿಸಿದನು.

### ಅಪೊಸ್ತಲರು ಮನವರಿಕೆ ಮಾಡಿಕೊಂಡರು

ಯೋಹಾನನ ಪ್ರಕಾರ, "ಅದೇ ದಿವಸದ ಅಂದರೆ ವಾರದ ಮೊದಲನೆಯ ದಿವಸ ಪುನರುತ್ಥಾನ ಹೊಂದಿದನು" (ಯೋಹಾನ 20:19ಎ). ಯೆಹೂದ್ಯರ ಪ್ರಕಾರ ಅದು ವಾರದ ಎರಡನೆಯ ದಿನ (ಸೂರ್ಯಸ್ತಮಾನದಿಂದ, ಸೂರ್ಯಸ್ತಮಾನಕ್ಕೆ), ಆದರೆ ಯೋಹಾನನು ರೋಮಾಯರ ಸಮಯವನ್ನು ಬಳಸಿದನು (ಮಧ್ಯ ರಾತ್ರಿಯಿಂದ ಮಧ್ಯ ರಾತ್ರಿಗೆ).[4] ಆದರೆ ವಾರದ ಮೊದಲನೆಯ ದಿನವೇ ಉಂಟಾದ ಪುನರುತ್ಥಾನವನ್ನು ಯೋಹಾನನು ಅಪೊಸ್ತಲರಿಗೆ ಮನವರಿಕೆ ಮಾಡಿದನು.[5]

ಅಪೊಸ್ತಲರು ತಂಗಿದ್ದ ಸ್ಥಳದ ಕುರಿತು ಮಾಹಿತಿ ಇಲ್ಲ;[6] ಆದರೆ, ಅವರು ಎಲ್ಲೆ ಇದ್ದರು, "ಯೆಹೂದ್ಯರ ಭಯದಿಂದ" ಬಾಗಿಲುಗಳನ್ನು ಹಾಕಿಕೊಂಡು ಇದ್ದರು (ಯೂದ 20:19ಬಿ). ಇತರೆ ಶಿಷ್ಯರು ಇದ್ದರೂ (ಲೂಕ 24:33, 36), ಆದರೆ ಯೇಸು ತನ್ನ ಅಪೊಸ್ತಲರ ಬಗ್ಗೆ ಹೆಚ್ಚು ಚಿಂತಿಸುತ್ತಿದ್ದನು (ಮಾರ್ಕ 16:14). ಇತರೆ ಹತ್ತು ಜನ ಅಪೊಸ್ತಲರು ಒಟ್ಟಾಗಿ ಇದ್ದರು (ಮಾರ್ಕ 16:14) - ತೋಮನ ಹೊರತಾಗಿ (ಯೋಹಾನ 20:24).

ಅಪೊಸ್ತಲರು "ಊಟಕ್ಕೆ ಕೂತಿದ್ದರು" (ಮಾರ್ಕ 16:14ಎ).[7] ಒಂದು ವೇಳೆ ಅದು ಸಾಯಂಕಾಲದ ಊಟವಿರಬಹುದು (ನೋಡಿ ಲೂಕ 24:41, 42). ಆಗ ಕ್ಲೋಯಿಫನು ಆತನ ಸ್ನೇಹಿತರು ಯೇಸುವನ್ನು ನೋಡಿದ ಸಂಗತಿಯನ್ನು ಹೇಳಲು ಉತ್ಸುಕರಾಗಿದ್ದರು (ಮಾರ್ಕ 16:12, 13; ಲೂಕ 24:33-35).

ಯೇಸುವನ್ನು ನೋಡಿದವರ ವರದಿಯನ್ನು ಕೆಲವರು ನಂಬಿದರೆ (ಲೂಕ 24:34), ಇತರೆ ಕೆಲವರು ನಂಬಲಿಲ್ಲ (ಮಾರ್ಕ 16:13).[8] ಅವರು ಆ ಸಂಗತಿಯ ಕುರಿತು ವಾಗ್ವಾದ ಮಾಡುತ್ತಿರಲು - ತಕ್ಷಣ - "ಯೇಸು ತಾನೇ ಅವರ ಮಧ್ಯದಲ್ಲಿ ಪ್ರತ್ಯಕ್ಷನಾದನು" (ಲೂಕ 24:36). ನಂತರ "ನಿಮಗೆ ಸಮಾಧಾನವಾಗಲಿ" ಅಂದನು (ಯೋಹಾನ 20:19ಸಿ).

"ಆಗ ಅಪೊಸ್ತಲರು ದಿಗಿಲುಬಿದ್ದು ಭಯ ಹಿಡಿದವರಾಗಿ ತಾವು ಕಂಡದ್ದನ್ನು ಭೂತವೆಂದು ಭಾವಿಸಿದರು" (ಲೂಕ 24:37).[9] ಅವರು ನಂಬದೆ ಇರುವಾಗ, ಅವರ ಅಪನಂಬಿಕೆಗೂ "ಅವರ ಮನಸ್ಸಿನ ಕಾಠಿಣ್ಯಕ್ಕೂ ಅವರನ್ನು ಗದರಿಸಿದನು" (ಮಾರ್ಕ 16:14ಬಿ). ಈಗಾಗಲೇ ಅವರು ಇಬ್ಬರು ಶಿಷ್ಯರ ಹಾಗೂ ಕೆಲವು ಸ್ತ್ರೀಯರ ಬಾಯಿಂದ ಪುನರುತ್ಥಾನದ ವಿಚಾರವನ್ನು ಪಡೆದದ್ದರಿಂದ, ಅವರಿಗೆ ಪುರಾವೆಯ ಅಗತ್ಯತೆ ಇರಲಿಲ್ಲ. "ಯೇಸು ಅವರಿಗೆ ಯಾಕೆ ಕಳವಳಪಡುತ್ತೀರಿ, ನಿಮ್ಮ ಹೃದಯಗಳಲ್ಲಿ ಅನುಮಾನ ಹುಟ್ಟುವದೇಕೆ?" (ಲೂಕ 24:38).

ಅವರ ಸಂದೇಹಗಳನ್ನು ನಾಶಮಾಡುವದಕ್ಕಾಗಿಯೇ ಆತನು ಅಲ್ಲಿದ್ದನು. ಆತನು ಅವರಿಗೆ, "ನನ್ನ ಕೈಗಳನ್ನು ನನ್ನ ಕಾಲುಗಳನ್ನು ನೋಡಿರಿ, ನಾನೇ ಅಲ್ಲವೇ? ನನ್ನನ್ನು ಮುಟ್ಟಿ ನೋಡಿರಿ. ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳು ಉಂಟು, ಅವು ಭೂತಕ್ಕಿಲ್ಲ" (ಲೂಕ 24:39). ಎಂದು ಹೇಳಿದ ಮೇಲೆ, "ಆತನು ತನ್ನ ಕೈ ಕಾಲುಗಳನ್ನು ತೋರಿಸಿದನು" (ಲೂಕ 24:40ಬಿ), ಅವುಗಳಲ್ಲಿ ರೋಮಾಯರ ಮೋಳೆಯ ಗುರುತುಗಳಿದ್ದವು (ಯೋಹಾನ 20:25, 27). "ತನ್ನ ಪಕ್ಕೆಗಳನ್ನು ... ಸಹ ತೋರಿದನು"

(ಯೋಹಾನ 20:20ಎ) (ನೋಡಿ ಯೋಹಾನ 20:25, 27).

"ನಂತರ ಶಿಷ್ಯರು ಆನಂದಿಸಿದರು" (ಯೋಹಾನ 20:20ಬಿ) - ಯೇಸು ಜೀವಿತನಾದದ್ದು ಒಳ್ಳೆಯದು ಹಾಗೂ ಸತ್ಯವು ಆಗಿದ್ದರೂ, ಅದನ್ನು ನಂಬುವದು ಅವರಿಗೆ ಕಷ್ಟಕರವಾಯಿತು. ಲೂಕನು ಇದನ್ನು: "... ಅವರು ಸಂತೋಷದ ದೆಸೆಯಿಂದ ಇನ್ನು ನಂಬದೆ ಆಶ್ಚರ್ಯಪಟ್ಟರು" (ಲೂಕ 24:41ಎ). "ಆತನು ತನ್ನನ್ನೆ ನಿರೂಪಿಸಿಕೊಳ್ಳಲು ತಿನ್ನತಕ್ಕ ಪದಾರ್ಥವೇನಾದರೂ?" (ಲೂಕ 24:41ಬಿ). "ನಿಮ್ಮಲ್ಲಿ ಉಂಟೋ ಎನ್ನಲು ಅವರು ಸುಟ್ಟ ಮೀನಿನ ಒಂದು ತುಂಡನ್ನು ಆತನಿಗೆ ಕೊಟ್ಟರು; ಆತನು ತಕ್ಕೊಂಡು ಅವರ ಮುಂದೆ ತಿಂದನು" (ಲೂಕ 24:42, 43).

ಅದು ಅವರಿಗೆ ಅಂತಿಮ ಪುರಾವೆಯಾಯಿತು. ನಂತರ ಯೇಸು "ನಿಮಗೆ ಸಮಾಧಾನ ವಾಗಲಿ" ಅಂದನು (ಯೋಹಾನ 20:21ಎ). ಜೀವದಿಂದ ಇದ್ದ ಯೇಸುವನ್ನು ನೋಡಿ; ಅವರು ಸಂತಸ ಪಟ್ಟರು (ನೋಡಿ ಯೋಹಾನ 20:25ಎ)!

**ಅಪೊಸ್ತಲರ ಸೇವಾ ಸಮರ್ಪಣೆ**

ನಂತರದ ನಲ್ವತ್ತು ದಿವಸಗಳಲ್ಲಿ, ಯೇಸು ತನ್ನ ಶಿಷ್ಯರಿಗೆ ಬಹಳವಾಗಿ ಉಪದೇಶ ಮಾಡುವವನಿದ್ದನು (ನೋಡಿ ಅಪೊಸ್ತಲರ ಕೃತ್ಯಗಳು 1:3), ಆದರೆ ಅವರನ್ನು ಸೇವೆಗಾಗಿ ಸಮರ್ಪಣೆ ಮಾಡುವದು ಅತಿ ಪ್ರಾಮುಖ್ಯವಾಗಿತ್ತು (ಮತ್ತಾಯ 28:19, 20; ಮಾರ್ಕ 16:15, 16). ಕ್ರಿಸ್ತನು ತಾನು ಜೀವದಿಂದ ಎದ್ದಿರುವದನ್ನು ತನ್ನ ಶಿಷ್ಯರಿಗೆ ನಿರೂಪಿಸಿದ ನಂತರ, ಅವರನ್ನು ಸೇವಾ ಕಾರ್ಯಕ್ಕೆ ಸಮರ್ಪಿಸುವದಕ್ಕಿದ್ದನು.

ಆತನ ಸೇವಾ ನಿಯಮಗಳ *ಪಾಲನೆಯನ್ನು* ಮಾತಾಡಿದನು: "... ತಂದೆ ನನ್ನನ್ನು ಕಳುಹಿಸಿ ಕೊಟ್ಟ ಹಾಗೆ, ನಾನೂ ನಿಮ್ಮನ್ನು ಕಳುಹಿಸಿಕೊಡುತ್ತೇನೆ" (ಯೋಹಾನ 20:21ಬಿ).[10] "ಅಪೊಸ್ತಲ" ಅಂದರೆ "ಕಳುಹಿಸಲ್ಪಟ್ಟವನು." ಅದರ "ಕಳುಹಿಸಲ್ಪಟ್ಟಿತು" ವಿವರಣೆಯನ್ನು ಮುಂದಿನ ಅಧ್ಯಯನದಲ್ಲಿ ಚರ್ಚಿಸಲಾಗುವದು (ಮತ್ತಾಯ 28:18-20; ಮಾರ್ಕ 16:15, 16).

ಸೇವೆಗೆ ಅಗತ್ಯವಿರುವ *ಬಲದ* ಬಗ್ಗೆ ಮಾತಾಡಿ: "ಅವರ ಮೇಲೆ ಊದಿ ಅವರಿಗೆ, ಪವಿತ್ರಾತ್ಮ ವರವನ್ನು ತಕ್ಕೊಳ್ಳಿರಿ" ಅಂದನು (ಯೋಹಾನ 20:22). ಆತನು ಊದಿದ ತಕ್ಷಣ ಅಪೊಸ್ತಲರು ಆತ್ಮದಿಂದ ತುಂಬಲ್ಪಡಲಿಲ್ಲ ಆ ಕಾರ್ಯವು ಮುಂದೆ ನಡೆಯಲಿತ್ತು (ಲೂಕ 24:49; ಯೋಹಾನ 7:39; ಅಪೊಸ್ತಲರ ಕೃತ್ಯಗಳು 1:4, 5, 8; 2:4). ಮುಂದೆ ಬರಲಿದ್ದ ಪವಿತ್ರಾತ್ಮನ ಮುನ್ಸೂಚನೆಯಾಗಿತ್ತು.[11] ಯೆಹೂದ್ಯರ ಪಂಚಾಶತ್ತಮ ದಿನದಂದು ಅಪೊಸ್ತಲರು ಪವಿತ್ರಾತ್ಮ ಸ್ನಾನವನ್ನು ಹೊಂದಿ, ಪ್ರಪಂಚಕ್ಕೆ ಸುವಾರ್ತೆ ಸಾರಲು ಬಲವನ್ನು ಹೊಂದುವವ ರಾಗಿದ್ದರು.[12]

ಸೇವೆಯ ಉದ್ದೇಶವನ್ನು ಆತನು ಮಾತಾಡಿದನು. ಆತನು ಅವರಿಗೆ, "ನೀವು ಯಾರ ಪಾಪಗಳನ್ನು ಕ್ಷಮಿಸಿಬಿಡುತ್ತೀರೋ ಅವರಿಗೆ ಅವುಗಳು ಕ್ಷಮಾಪಣೆಯಾಗುತ್ತವೆ; ಯಾರ ಪಾಪಗಳನ್ನು ಕ್ಷಮಿಸದೆ ಉಳಿಸುತ್ತಿರೋ ಅವರಿಗೆ ಅವುಗಳು ಉಳಿಯುತ್ತವೆ ಅಂದನು" (ಯೋಹಾನ 20:23).[13] ಅಂದರೆ ಅವರು ಯಾರನ್ನು ಕ್ಷಮಿಸಬೇಕು, ಮತ್ತು ಯಾರನ್ನು ಕ್ಷಮಿಸಬಾರದು ಎಂಬ ನಿರ್ಣಯವಲ್ಲ. ಅಪೊಸ್ತಲರ ಪ್ರಸಂಗದಲ್ಲಿ ಒತ್ತಿ ಹೇಳಬಹುದಾದ ಕ್ಷಮಾಪಣೆಯಾಗಿದೆ. ಅವರ ಬೋಧನೆಗಳನ್ನು ಕೇಳಿದವರಿಗೆ ಕ್ಷಮೆ, ಕೇಳದವರಿಗೆ ಕ್ಷಮೆ ಇರುವದಿಲ್ಲ ಎಂಬ ಅರ್ಥವಾಗಿದೆ (ಅಪೊಸ್ತಲರ ಕೃತ್ಯಗಳು 2:36-38, 41, 47).

**ಅಪೊಸ್ತಲರು ಹೊಂದಿದ್ದ ಒಂದು ಸವಾಲು**

ಯೇಸು ಬಂದಾಗ, "ಹನ್ನೆರಡು ಮಂದಿ ಶಿಷ್ಯರೊಳಗೆ ಒಬ್ಬನಾದ ತೋಮನು ಅವರ ಸಂಗಡ ಇರಲಿಲ್ಲ"[14] (ಯೋಹಾನ 20:24). ಅವನು ಉಳಿದ ಶಿಷ್ಯರ ಬಳಿಗೆ ಬರಲು,

"ಅವರು ನಾವು ಸ್ವಾಮಿಯನ್ನು ನೋಡಿದೆವು!" (ಯೋಹಾನ 20:25ಎ) ಅಂದರು. ಆದರೆ ಅವನು ಸಂದೇಹಪಟ್ಟು: "ಆದದರಿಂದ ಉಳಿದ ಶಿಷ್ಯರು - ನಾವು ಸ್ವಾಮಿಯನ್ನು ನೋಡಿದ್ದೇವೆ ಎಂದು ಅವನಿಗೆ ಹೇಳಿದರು. ಅದಕ್ಕೆ ಅವನು - ನಾನು ಆತನ ಕೈಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಗಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದರೆ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ ಅಂದನು" (ಯೋಹಾನ 20:25ಬಿ).

## ಆ ಒಬ್ಬ ಅಪೊಸ್ತಲನಿಗೆ ಅವರು ಹೇಗೆ ಮನವರಿಕೆ ಮಾಡಿದರು (ಯೋಹಾನ 20:26-31; 1 ಕೊರಿಂಥ 15:5ಬಿ)

ಒಂದು ವಾರ ಕಳೆದ ನಂತರ, ಅವರು ಗಲಿಲಾಯಕ್ಕೆ ಹೋಗಬೇಕೆಂಬ ಆದೇಶ ಪಡೆದಿದ್ದರು (ಮತ್ತಾಯ 28:10), ಆದರೆ ಅವರು ತಡಮಾಡಿದರು ಯಾಕಂದರೆ ಅವರ ಹೃದಯಗಳು ನಂಬಿಕೆಯಲ್ಲಿ ಇನ್ನು ಐಕ್ಯವಾಗಿರಲಿಲ್ಲ.[15] ಕರ್ತನು ಯಾಕೆ ಒಂದು ವಾರ ತಡೆದನು ಎಂಬ ಕಾರಣ ತಿಳಿದಿರುವದಿಲ್ಲ. ಒಂದು ವೇಳೆ ಶಿಷ್ಯರೆಲ್ಲರೂ ಈಗಾಗಲೇ ನಡೆದ ಘಟನೆಗಳನ್ನು ಮೆಲಕು ಹಾಕುವಂತೆ ಕರ್ತನು ಮಾಡಿರ ಬಹುದು.

**"ನೋಡಿ ನಂಬುವದು."**

"ಎಂಟು ದಿವಸಗಳಾದ ನಂತರ,[16] ಶಿಷ್ಯರೆಲ್ಲರೂ ತಾವು [ಹಿಂದೆ ಇರುತ್ತಿದ್ದ] ಮನೆಯಲ್ಲಿ ಒಟ್ಟಾಗಿ ಸೇರಿದ್ದರು, ಅವರ ಸಂಗಡ ತೋಮನು ಸಹ ಇದ್ದನು" (ಯೋಹಾನ 20:26ಎ), ನಂತರ ಯೇಸು ಅವರಿಗೆ ಎರಡನೆಯ ಸಾರಿ ಕಾಣಿಸಿಕೊಂಡನು (ನೋಡಿ 1 ಕೊರಿಂಥ 15:5ಬಿ). ಈಗಲೂ ಸಹ ಅವರು ಹಿಂದಿನ ಪರಿಸ್ಥಿತಿಯಲ್ಲಿ ಇದ್ದಂತೆ ಕೂಡಿಕೊಂಡಿದ್ದರು (ಆದರೆ ಬಾಗಿಲುಗಳು ಮುಚ್ಚಿದವು), "ಆಗ ಯೇಸು ನಿಮಗೆ ಸಮಾಧಾನವಾಗಲಿ ಅಂದನು" (ಯೋಹಾನ 20:26ಬಿ).

ತೋಮನ ಅನುಕೂಲಕ್ಕಾಗಿ ಯೇಸು ಎರಡನೆಯ ಸಾರಿ ಪ್ರತ್ಯಕ್ಷನಾದನು. ಸಂದೇಹಪಟ್ಟ ಅವನಿಗೆ, "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಕೈಗಳನ್ನು ಮುಟ್ಟಿ ನೋಡು; ನಿನ್ನ ಕೈಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು ಎಂದು ಹೇಳಿದನು" (ಯೋಹಾನ 20:27). "ತಕ್ಷಣವೇ ತೋಮನು ಪ್ರತಿಕ್ರಿಯಿಸಿ, ಸತ್ಯದ ವಿಚಾರದಲ್ಲಿ":[17] "ನನ್ನ ಸ್ವಾಮಿ ನನ್ನ ದೇವರು!"[18] ಎಂದು ಹೇಳಿದನು (ಯೋಹಾನ 20:28). J. W. McGarvey ಈ ಕೆಳಕಂಡ ಹೇಳಿಕೆಯನ್ನು ನೀಡಿದ್ದಾರೆ,

> ತೋಮನಲ್ಲಿ ಬಹಳ ಭಾರವಾದ ಸಂದೇಹವಿತ್ತು. ಅವನ ಕ್ರಿಸ್ತನ ಕುರಿತಾದ ಅರಿಕೆ ಪರಿಪೂರ್ಣವಾಗಿತ್ತು. ಪ್ರಮುಖವಾಗಿ ಅವನು ಪುನರುತ್ಥಾನದ ಕುರಿತು ಸಂದೇಹ ಪಟ್ಟಿದ್ದರಿಂದ, ಕೊನೆಯಲ್ಲಿ ಯೇಸು ದೇವರೇ ಆಗಿದ್ದಾನೆ ಎಂದು ಅರಿಕೆ ಮಾಡಿದನು.[19]

**"ನಂಬುವದೇ ನೋಡುವಂಥದ್ದು."**

ಕ್ರಿಸ್ತನು ತೋಮನಿಗೆ, "ನೀನು ನನ್ನನ್ನು ನೋಡಿದ್ದರಿಂದ, ನಂಬಿದೆಯಲ್ಲವೇ?" ಅಂದನು (ಯೋಹಾನ 20:29ಎ). ಆ ಎಚ್ಚರಿಕೆ ತೋಮನಿಗೆ ಮಾತ್ರ ಸೀಮಿತವಾಗಿರದೆ, ಎಲ್ಲಾ ಅಪೊಸ್ತಲರಿಗೂ ಅನ್ವಯಿಸುತ್ತಿತ್ತು (ಮಾರ್ಕ 16:14). ಆತನನ್ನು ನೋಡುವವರಿಗೆ ಅವರ್ಯಾರೂ ಆತನನ್ನು ನಂಬಿರಲಿಲ್ಲ.

ನಂತರ ಕರ್ತನು, "ನೋಡದೆ ನಂಬುವವರು ಧನ್ಯರು" ಎಂದನು (ಯೋಹಾನ 20:29ಬಿ). ಇದು, ಆತನು ಪುನರುತ್ಥಾನವಾಗಿ ಅವರಿಗೆ ಕಾಣಿಸಿಕೊಳ್ಳದೆ ಇರುವಾಗಲು,

ಆತನನ್ನು ನಂಬಿದವರಿಗೆ ಉಂಟಾಗುವ ಆಶೀರ್ವಾದದ ಸೂಚನೆಯಾಗಿದೆ.[20] ಪ್ರಸ್ತುತ ಜೀವಿಸುತ್ತಿರುವ ನಾವುಗಳು ಆತನ ಪುನರುತ್ಥಾನವನ್ನು ದೈಹೀಕ ಕಣ್ಣುಗಳಿಂದ ನೋಡದೆ ಇದ್ದು, ನಂಬುವವರಾದರೆ, ಆ ಆಶೀರ್ವಾದಗಳನ್ನು ನಾವುಗಳೂ ಸಹ ಹೊಂದಬಹುದಾಗಿದೆ. ಯೇಸುವಿನ ಈ ಮಾತುಗಳನ್ನು ಕಿವಿಯಾರೆ ಕೇಳಿದವರು ನಂತರದಲ್ಲಿ ಬರೆದು, "ನೀವು ಆತನನ್ನು ಕಣ್ಣಾರೆ ನೋಡಲಿಲ್ಲವಾದರೂ ಆತನನ್ನು ಪ್ರೀತಿಸುತ್ತೀರಿ. ನೀವು ಈಗ ಆತನನ್ನು ಕಾಣದಿದ್ದರೂ ಆತನಲ್ಲಿ ನಂಬಿಕೆಯಿಟ್ಟು ನಿಮ್ಮ ನಂಬಿಕೆಯ ಅಂತ್ಯಫಲವಾಗಿರುವ ಆತ್ಮರಕ್ಷಣೆಯನ್ನು ಹೊಂದುವವರಾಗಿ ಹೇಳಲಶಕ್ಯವಾದಂಥ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೀರಿ" (1 ಪೇತ್ರ 1:8).

"ನೋಡುವದೇ, ನಂಬುವದು" ಎಂಬ ಹಳೆಯ ನಾಣ್ಣುಡಿಯಿದೆ: ಅಂದರೆ "ನಂಬಿದಾಗ ನೋಡಿದಂತೆಯೇ" ಎಂಬ ಅರ್ಥ. ನಾವು ಕರ್ತನನ್ನು ನಂಬಿದಾಗ "ನೋಡಿದ್ದೇವೆ" (ಎಂಬ ಭರವಸೆ), ಅಥವಾ "ನೋಡಿದ್ದೇವೆ" (ಅರ್ಥಮಾಡಿಕೊಂಡಿದ್ದೇವೆ). "ಆಗ ನಾವುಗಳು ಹೇಳಲಶಕ್ಯವಾದ ಪ್ರಭಾವವುಳ್ಳ ಸಂತೋಷದಿಂದ ಹರ್ಷಿಸುತ್ತೇವೆ."

ಯೇಸುವನ್ನು ಕಣ್ಣಾರೆ ಕಾಣದೆ ಇದ್ದರೂ, ಆತನನ್ನು ನಂಬುವದು ಹೇಗೆ? ಅದಕ್ಕೆ ಯೋಹಾನನು ಪ್ರತ್ಯುತ್ತರವನ್ನು ನೀಡಿರುವನು. "ಯೇಸು ಇನ್ನು ಬೇರೆ ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ [ಯೋಹಾನ ಗ್ರಂಥದಲ್ಲಿ]" (ಯೋಹಾನ 20:30; ನೋಡಿ 21:25). ಯೋಹಾನನು ತಿಳಿಸದೆ ಇರುವ ಸೂಚಕ ಕಾರ್ಯಗಳನ್ನು ಮತ್ತಾಯ, ಮಾರ್ಕ, ಹಾಗೂ ಲೂಕ, ಸುವಾರ್ತೆಗಳಲ್ಲಿ ತಿಳಿಸಲಾಗಿದೆ.

ಯೋಹಾನನು ಮುಂದುವರೆಸಿ, "ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ" (ಯೋಹಾನ 20:31).[21] ಯೋಹಾನನ ಪ್ರಕಾರ, ನಂಬಿಕೆಗೆ *ಸಾಕಾಗುವಷ್ಟು ಬರಹವನ್ನು* ಬರೆದಿದ್ದಾನೆ. *ಅಪೊಸ್ತಲರ* ಬೋಧನೆಯಿಂದ ಮುಂದೆ ನಂಬಲಿರುವವರ ಬಗ್ಗೆಯೂ ತಿಳಿಸಿರುವನು (ಯೋಹಾನ 17:20). ಪೌಲನು ನಂತರದಲ್ಲಿ, "ಕ್ರಿಸ್ತನ ವಾಕ್ಯವನ್ನು ಕೇಳುವದರಿಂದ ನಂಬಿಕೆ ಬರುತ್ತದೆ" (ರೋಮಾಪುರ 10:17) ಎಂದು ಬರೆದನು. ಕ್ರಿಸ್ತನನ್ನು ನೋಡದೆ ಇದ್ದರೂ ಹೊಸ ಒಡಂಬಡಿಕೆಯಲ್ಲಿ ಬರೆದಿರುವ ಪ್ರೇರಿತ ವಾಕ್ಯಗಳನ್ನು ನಂಬುವವನು ಧನ್ಯನು!

## ಏಳು ಜನ ಶಿಷ್ಯರ ಪರಿವರ್ತನೆಗೆ ಕಾರಣವಾದ ವಿಚಾರವೇನು (ಯೋಹಾನ 21:1-24)

ಈಗ ಚಿತ್ರಣವು ಯೂದಾಯದಿಂದ, ಗಲಿಲಾಯಾದ ಕಡೆಗೆ ಸಾಗಿದೆ. ಗಲಿಲಾಯದಲ್ಲಿ ಯೇಸು ಅವರನ್ನು ಸಂಧಿಸುವನೆಂದು ಮುಂತಿಳಿಸಿದನು (ಮತ್ತಾಯ 26:32; 28:7). "ತರುವಾಯ ಯೇಸು ತಿಬೇರಿಯದ ಸಮುದ್ರದ ಬಳಿಯಲ್ಲಿ" - ಮೂರನೆಯ ಸಾರಿ[22] - "ಶಿಷ್ಯರಿಗೆ ತಿರಿಗಿ ತನ್ನನ್ನು ತೋರಿಸಿಕೊಂಡನು" (ಯೋಹಾನ 21:1, 14). ತಿಬೇರಿಯ ಎಂಬುದು ಗಲಿಲಾಯ ಸಮುದ್ರದ ಇನ್ನೊಂದು ಹೆಸರು (ಯೋಹಾನ 6:1).[23] ಇದು ನಡೆದಿರುವ ಖಚಿತವಾದ ಸಮಯದ ಮಾಹಿತಿ ಇರುವದಿಲ್ಲ. ಯೋಹಾನ 6:1ರಲ್ಲಿ, ಆತನು ಎರಡು ಸಾರಿ ಕಾಣಿಸಿಕೊಂಡ ನಂತರ, ಅಂದರೆ ನಲ್ವತ್ತು ದಿವಸಗಳಲ್ಲಿ ಸಂಭವಿಸಿರಬಹುದು.

### ಕೆಲವು ಅಪೊಸ್ತಲರಿಗೆ ನೆನಪು ಮಾಡಲಾಯಿತು

ಗಲಿಲಾಯ ಸಮುದ್ರದ ಬಳಿ ಏಳು ಜನ ಶಿಷ್ಯರು ಇದ್ದರು: "ಸೀಮೋನ ಪೇತ್ರನು, ಮತ್ತು ದಿದುಮನೆಂಬ ತೋಮನು ಗಲಿಲಾಯದ ಕಾನಾ ಊರಿನ[24] ನತಾನಿಯೇಲನು

ಜೆಬೆದಾಯನ ಕುಮಾರರೂ ಆತನ ಶಿಷ್ಯರಲ್ಲಿ ಇನ್ನಿಬ್ಬರೂ ಕೂಡಿದ್ದರು …" (ಯೋಹಾನ 21:2).[25] ಈ ಸ್ಥಳವು ಶಿಷ್ಯರಿಗೆ, ಪ್ರಮುಖವಾಗಿದ್ದು, ಕ್ರಿಸ್ತನು ಇಲ್ಲಿ ಅನೇಕ ಸಂಗತಿಗಳನ್ನು ಮಾಡಿದನು.[26] ಪೇತ್ರ ಯೋಹಾನರು ಯೇಸುವಿನ ಶಿಷ್ಯರಾಗುವ ಮೊದಲು, ಇದೇ ನೀರಿನಲ್ಲಿ ಮೀನು ಹಿಡಿಯುತ್ತಿದ್ದರು (ಮತ್ತಾಯ 4:18-22).

ಪ್ರಾಯಶಃ ಶಿಷ್ಯರು ಅನೇಕ ಸಮಯದ ನಂತರ ಈ ಸ್ಥಳಕ್ಕೆ ಧಾವಿಸಿರಬಹುದು. ಪೇತ್ರನು ಅವಿಶ್ರಾಂತನಾಗಿದ್ದನು. "ನಾನು ಮೀನು ಹಿಡಿಯಲು" ಹೋಗುತ್ತೇನೆಂದು ಹೇಳಲು, "ಇತರರೂ ನಾವು ಸಹ ಬರುತ್ತೇವೆ" ಅಂದರು (ಯೋಹಾನ 21:3ಎ). ಅಪೊಸ್ತಲರು ತಮ್ಮ ಅಪೊಸ್ತಲತ್ವವನ್ನು ತೊರೆದು ಬಿಟ್ಟಿದ್ದರೆಂದು ಕೆಲವರು ಇದಕ್ಕೆ ಅರ್ಥಕೊಟ್ಟರು (ವಚನ 3ಬಿ). ಕರ್ತನು ನೀಡಿದ್ದ ಭವಿಷ್ಯದ ಯೋಜನೆಯ ಕುರಿತು ಅವರು ಗೊಂದಲಕ್ಕೊಳಗಾಗಿದ್ದರೂ, ಅವರು ಕರ್ತನನ್ನು ತೊರೆದರು ಎಂದು ಹೇಳುವ ನಿರ್ಣಯ ತಪ್ಪಾಗುತ್ತದೆ. ಇದರ ಕುರಿತು, Philip Pendleton ರವರು ಕೆಳಕಂಡಂತೆ ಬರೆದಿದ್ದಾರೆ,

> ಅವರು ಮೀನು ಹಿಡಿಯುವದಕ್ಕೆ ಹಿಂದಿರುಗಿದ ನಿಮಿತ್ತವಾಗಿ, ಅವರು ಅಪೊಸ್ತಲತ್ವವನ್ನು ಕಳಕೊಂಡರು ಎಂಬ ಅರ್ಥವಲ್ಲ. ಅವರು ಮಾಡಬೇಕಾದ ಅಭಿವೃದ್ಧಿ ಕಾರ್ಯವು ತಡವಾದ್ದರಿಂದ, ಅವರು ತಮ್ಮ ಕಾರ್ಯಕ್ಕೆ ಹಿಂದಿರುಗಿ ಒಂದು ದೊಡ್ಡ ಶೋಧನೆಗೆ ಒಳಗಾಗಿದ್ದರು [ಲೂಕ 9:62].[27]

ಅವರು, "ರಾತ್ರಿ ಕಾಲದಲ್ಲಿ ಹೊರಟು ದೋಣಿಯನ್ನು ಹತ್ತಿದ್ದರು;[28] ಆದರೆ ಆ ರಾತ್ರಿಯಲ್ಲಿ[29] ಒಂದೂ ಮೀನು ಸಿಕ್ಕಲಿಲ್ಲ" (ಯೋಹಾನ 21:3ಸಿ). ಅನುಭವಿಗಳಾದ ಎಂಥವರೇ ಆಗಿದ್ದರೂ ಹಗಲಿನಲ್ಲಿ ಮೀನು ಹಿಡಿಯುವಾಗ ಇಂಥಹ ಸಮಸ್ಯೆ ಎದುರಿಸುತ್ತಾರೆ!

"ಬೆಳಗಾಗುವಾಗ ಯೇಸು ದಡದಲ್ಲಿ ನಿಂತಿದ್ದನು" (ವಚನ 4ಎ); ಆದರೆ ಅವರು ಸುಮಾರು ಮುನ್ನೂರು ಅಡಿಗಳ ಅಂತರದಲ್ಲಿರುವಾಗ[30] (ವಚನ 8), ಅದಾಗ್ಯೂ ಆತನನ್ನು ಯೇಸುವೆಂದು ತಿಳಿಯಲಿಲ್ಲ (ವಚನ 4ಬಿ).[31] ಯೇಸು ಅವರಿಗೆ, "ಮಕ್ಕಳಿರಾ,[32] ಊಟಕ್ಕೆ ನಿಮಗೆ ಏನೂ ಇಲ್ಲವೆ?" (ವಚನ 5ಎ). ಅವರ ಪ್ರತ್ಯುತ್ತರ ನಾಚಿಕೆ ಪಡಿಸುವಂತ್ತಾದ್ದಾಗಿತ್ತು. ಅವರು "ಇಲ್ಲಾ" ಎಂದು ಹೇಳಿದರು (ವಚನ 5ಬಿ).

ಯೇಸು ತಿರುಗಿ, "ನೀವು ದೋಣಿಯ ಬಲಗಡೆಯಲ್ಲಿ ಬಲೆ ಬೀಸಿದರೆ ಸಿಕ್ಕುವದು ಎಂದು ಹೇಳಿದನು" (ವಚನ 6ಎ). ಒಂದು ವೇಳೆ ಆ ಅಪರಿಚಿತ ಮನುಷ್ಯನು ಕಂಡದ್ದನ್ನು ಶಿಷ್ಯರು ಕಂಡಿರಲಿಕ್ಕಿಲ್ಲ. ಮೀನುಗಳು ನೀರಿನಲ್ಲಿ ಶಬ್ದಮಾಡುವದನ್ನು ಆತನು ನೋಡಿರಬಹುದು. "ಅವರು ಹಾಗೆ ಬೀಸಿದಾಗ ಮೀನುಗಳು ಬಹಳ ಹೆಚ್ಚಾಗಿ ಸಿಕ್ಕಿದ್ದರಿಂದ ಬಲೆಯನ್ನು ಎಳೆ ಯುವುದಕ್ಕೆ ಆಗದೆ ಹೋಯಿತು" (ವಚನ 6ಬಿ). "ಆ ಬಲೆಯಲ್ಲಿ ನೂರೈವತ್ತು ಮೀನುಗಳು ಇದ್ದವು" (ವಚನ 11[33]).

ಎಲ್ಲರಲ್ಲೂ ಆಶ್ಚರ್ಯ ಉಂಟಾಗಿರುವಾಗ,[34] ಯೋಹಾನನು ಈ ಹಿಂದೆ ತನಗುಂಟಾದ ಅನುಭವವನ್ನು ನೆನಪು ಮಾಡಿಕೊಂಡಿರಬಹುದು: ಅವನು ಅದ್ಭುತವಾಗಿ ಮೀನುಗಳನ್ನು ಹಿಡಿಯುವಾಗ, ಕರ್ತನು ಅವನನ್ನು ಪೂರ್ಣಾವಧಿ ಸೇವೆಗೆ ಕರೆದಿದ್ದನು (ಲೂಕ 5:1-11). ಅವರು ಸ್ವಾಮಿಯವರು ಎಂದು ಅವನು ಪೇತ್ರನಿಗೆ ಹೇಳಲಾಗಿದನು (ಯೋಹಾನ 21:7ಎ).

ಸ್ವಾಮಿಯವರೆಂದು ಸೀಮೋನ ಪೇತ್ರನು ಕೇಳಿ ಮೈಮೇಲೆ (ಬಟ್ಟೆ ಇಲ್ಲದವನಾಗಿದ್ದರಿಂದ[35]) ವಲ್ಲಿಯನ್ನು ಸುತ್ತಿಕೊಂಡನು (ವಚನ 7ಬಿ). ಮೀನು ಹಿಡಿಯಲು ತನ್ನ ಬಟ್ಟೆಯನ್ನು ಕಳಚಿದ್ದನು,[36] ಆದರೆ ಈಗ ಪುನಃ ಧರಿಸಿಕೊಂಡನು. ಬಟ್ಟೆ ಧರಿಸಿ ಈಜುವದು ಕಷ್ಟ ಆದರೆ ತನ್ನ ಯಜಮಾನನಿಗೆ ಈ ರೀತಿ ಗೌರವಿಸಿದನು. ದೋಣಿಯು ಸಮುದ್ರ ತೀರದವರೆಗೆ ತಲುಪುವಷ್ಟರಲ್ಲಿ ಪೇತ್ರನು ಸಮುದ್ರದಲ್ಲಿ ದುಮುಕಿದನು (ವಚನ 7ಸಿ). "ಉಳಿದ ಶಿಷ್ಯರು ಮೀನು ತುಂಬಿದ ಆ ಬಲೆಯನ್ನು

ಎಳೆಯುತ್ತಾ ದೋಣಿಯಲ್ಲಿಯೇ[37] ... ಬಂದರು" (ವಚನ 8).

"ಅವರು ಭೂಮಿಗೆ ಇಳಿದಾಗ ಕೆಂಡಗಳನ್ನು ಅವುಗಳ ಮೇಲೆ ಇಟ್ಟಿದ್ದ ಮೀನುಗಳನ್ನು ರೊಟ್ಟಿ ಸಹಿತವಾಗಿ ಕಂಡರು" (ವಚನ 9).[38] ಅವರು ಹಿಡಿದ ಮೀನುಗಳನ್ನು ಸಹ ಅದರೊಂದಿಗೆ ಸೇರಿಸಿದರು (ವಚನಗಳು 10, 11). ಎಲ್ಲವೂ ಸಿದ್ಧವಾದ ನಂತರ, "ಯೇಸು ಅವರಿಗೆ ಬಂದು ಊಟ ಮಾಡಿರಿ" ಎಂದನು (ವಚನ 12ಎ). ಯೇಸು ಅವರಿಗೆ ಬಡಿಸಿದನು (ವಚನ 13). ಆತನು ಜೀವದಿಂದ ಎದ್ದು ಬಂದಿದ್ದ (ವಚನ 12ಬಿ) ಸ್ವಾಮಿ ಎಂದು ತಿಳಿದುಕೊಂಡರು![39]

**ಅಪೊಸ್ತಲನು ಪುನಶ್ಚೇತನಗೊಂಡನು**

ಈ ಹಿಂದೆ ಯೇಸು ಪ್ರತ್ಯಕ್ಷನಾದಾಗ ತೋಮನು ಪ್ರಮುಖನಾಗಿದ್ದರೆ, ಪ್ರಸ್ತುತ ಪೇತ್ರನು ಪ್ರಮುಖನಾಗಿದ್ದನು. ಅಪೊಸ್ತಲರಲ್ಲಿ ಪೇತ್ರನು ಭವಿಷ್ಯದ ಬಗ್ಗೆ ಅತಿಗೊಂದಲದಲ್ಲಿದ್ದನು. ನಾನು ಆತನನ್ನು ಅಲ್ಲಗಳೆದದ್ದನ್ನು ಕ್ಷಮಿಸುವನೇ? "ಆತನ ಯೋಜನೆಯಲ್ಲಿ ನನಗೆ ಪಾಲು ನೀಡುವನೇ?" ಅವರು ಊಟ ಮಾಡಿದ ನಂತರ (ವಚನ 15ಎ), ಯೇಸು ತನ್ನ ಶಿಷ್ಯರನ್ನು ಪ್ರತ್ಯೇಕ ಮಾಡಿದ ಮೇಲೆ,[40] ಉದ್ವೇಗದ ವಾತಾವರಣ ಉಂಟಾಯಿತು.

ಮೊದಲಿಗೆ ಕರ್ತನು ಪೇತ್ರನಿಗೆ, "ಯೋಹಾನನ, ಮಗನಾದ ಸೀಮೋನನೇ ನೀನು ಇವರಿಗಿಂತ ಹೆಚ್ಚಾಗಿ ನನ್ನ ಮೇಲೆ ಪ್ರೀತಿ ಇಟ್ಟಿದ್ದೀಯೋ?" (ವಚನ 15ಬಿ). ಪೇತ್ರನು ಇತರರಿಗಿಂತ ಪ್ರಮುಖನಾದ ಕಾರಣ ಯೇಸು ಈ ರೀತಿ ಕೇಳಿರಬಹುದು ಎಂಬುದು ಕೆಲವರ ಅಭಿಪ್ರಾಯ (ಮತ್ತಾಯ 26:33). ಇದು ಮೀನಿನ ಹಾಗೂ ಬಲೆಯ ವಿಷಯ ಎಂದು ಇತರರು ತಿಳಿದರು, ಬೇಸರಗೊಂಡ ಪೇತ್ರನು ಮೀನು ಹಿಡಿಯುವದಕ್ಕೆ ಹೊರಟಿದ್ದನು. ನಾವು ಅದರ ಅರ್ಥವನ್ನು ಕಂಡು ಹಿಡಿಯುವ ಬದಲು, "*ಇತರರಿಗಿಂತ ಹೆಚ್ಚಾಗಿ ನನ್ನನ್ನು* ಪ್ರೀತಿಸುವಿಯಾ?" ಎಂಬ ಪ್ರಶ್ನೆಯ ಬಗ್ಗೆ ಆಲೋಚಿಸೋಣ.

ಪೇತ್ರನು, "ಆತನಿಗೆ, ಹೌದು ಸ್ವಾಮಿ ನಿನ್ನ ಮೇಲೆ ಮಮತೆ ಇಟ್ಟಿದ್ದೇನೆಂಬುದನ್ನು ನೀನೆ ಬಲ್ಲೆ" (ಯೋಹಾನ 21:15ಸಿ) ಅಂದನು. ಯೇಸು ಇಲ್ಲಿ "ಪ್ರೀತಿ" ಎಂಬುದಕ್ಕೆ *"ಅಗಾಪೆ" agapao* ಎಂಬ ಗ್ರೀಕ್ ಪದವನ್ನು ಬಳಸಿದ್ದಾನೆ. "ದೇವರು ಪ್ರೀತಿ ಸ್ವರೂಪನು" ಎಂಬುದಕ್ಕೆ ಯೋಹಾನನು "ಅಗಾಪೆ" ಎಂಬ ಪದವನ್ನು ಬಳಸಿದ್ದಾನೆ (1 ಯೋಹಾನ 4:8). "ದೇವರ ಪ್ರೀತಿಯ ಮಹತ್ವದ" ಕುರಿತು, ಪೌಲನು ಸಹ ಇದೇ ಪ್ರಕಾರ ಬರೆದಿರುವನು (1 ಕೊರಿಂಥ 13). ಯೇಸುವಿನ ಪ್ರಶ್ನೆಗೆ ಪೇತ್ರನು "ಫಿಲಿಯೋ" ಎಂಬ ಪದದಿಂದ ಉತ್ತರಿಸಿದನು. "ಪ್ರೀತಿ" - ಎಂಬುದಕ್ಕೆ ಸ್ವಲ್ಪ ಕಡಿಮೆಯಾದ ಪದ ಅಂದರೆ "ಸ್ನೇಹ ಹಾಗೂ ವಿಶ್ವಾಸ."[41] ಅದಕ್ಕೆ ಯೇಸು, "ನಿನು ನನ್ನನ್ನು ನಿಜವಾಗಿ ಪ್ರೀತಿಸುವಿಯಾ?" ಆಗ ಪೇತ್ರನು ಕರ್ತನೇ ನಾನು *ನಿನ್ನ ಸ್ನೇಹಿತನಲ್ಲವೇ ಎಂದು ಉತ್ತರಿಸಿದನು.*[42] ಒಂದು ಸಾರಿ ಬಿದ್ದು ಹೋಗಿದ್ದ ಪೇತ್ರನು, "ಅಗಾಪೇ"[43] ಎಂಬ ಪ್ರೀತಿಯಿಂದ, ಪ್ರೀತಿಸಲು ಅಸಾಧ್ಯ ಎಂದು ತೋರ್ಪಡಿಸಿಕೊಂಡನು.[44] ಆಗ ಯೇಸು, "ನನ್ನ ಕುರಿಮರಿಗಳನ್ನು ಮೇಯಿಸು" ಅಂದನು (ವಚನ 15ಬಿ).

ಯೇಸು ಎರಡನೆಯ ಸಾರಿ, "ಯೋಹಾನನ ಮಗನಾದ ಸೀಮೋನನನೇ ನನ್ನ ಮೇಲೆ ಪ್ರೀತಿ ಇಟ್ಟಿದ್ದಿಯಾ?" (ವಚನ 16ಎ). ಅದಕ್ಕೆ ಅಪೊಸ್ತಲನು, "ಹೌದು ಸ್ವಾಮಿ ನಿನ್ನ ಮೇಲೆ ಮಮತೆ ಇಟ್ಟಿದ್ದಿದ್ದೇನೆ ಅಂದನು" (ವಚನ 17ಬಿ). ಕರ್ತನು ಅವನಿಗೆ "ನನ್ನ ಕುರಿಗಳನ್ನು ಕಾಯಿ" ಅಂದನು (ವಚನ 17ಸಿ).

ಮೂರನೇ ಸಾರಿ ಕರ್ತನು, "ಯೋಹಾನನ ಮಗನಾದ ಸೀಮೋನನೇ ನನ್ನ ಮೇಲೆ ಮಮತೆ ಇಟ್ಟಿದ್ದೀಯೇ?" ಅಂದನು (ವಚನ 17ಎ). ಈ ಸಾರಿ ಯೇಸು ಪೇತ್ರನಿಗೆ "ಪ್ರೀತಿ" ಎಂಬ ಪದಕ್ಕೆ ಬಳಸಿದ್ದ "ಫಿಲಿಯೋ" ಎಂಬ ಪದವನ್ನು ಉಪಯೋಗಿಸಿ, "ನೀನು *ನಿಜವಾಗಲೂ* ನನ್ನ ಸ್ನೇಹಿತನೋ?" ಎಂದು ಕೇಳಿದನು. ಕ್ರಿಸ್ತನ ಮಾತಿಗೆ ಅಪೊಸ್ತಲನು ಕಳವಳಗೊಂಡನು. "ಸ್ವಾಮಿ ನೀನು ಎಲ್ಲಾ ಬಲ್ಲೆ; ನಿನ್ನ ಮೇಲೆ ನಾನು ಮಮತೆ

ಇಟ್ಟಿದ್ದೇನೆಂಬುದನ್ನು ನಿನಗೆ ತಿಳಿದದೆ ಅಂದನು" (ವಚನ 17ಬಿ). ಅಂದರೆ, "ನೀನು ನನ್ನ ಸ್ನೇಹಿತನಾದ್ದರಿಂದ" "ನನ್ನ ಕುರಿಗಳನ್ನು ಮೇಯಿಸು" ಎಂದು ಕ್ರಿಸ್ತನು ಹೇಳಿದನು (ವಚನ 17ಸಿ).

ಈ ವಿಧವಾದ ಸಂಭಾಷಣೆಯಲ್ಲಿ, ಪೇತ್ರನು ಕರ್ತನನ್ನು ಮೂರು ಸಾರಿ ಅಲ್ಲಗಳೆದ ನಿಮಿತ್ತ ಮೂರು ಸಾರಿ ಅವನು ಪಾಪದ ಅರಿಕೆ ಮಾಡಿ, ತನ್ನ ತಪ್ಪುಗಳಿಗೆ ಕ್ಷಮಾಪಣೆ ಹೊಂದಿದನು. ಅವನ ಕರ್ತನು ಅವನನ್ನು ತಳ್ಳಿಬಿಡದೆ. ಅವನಿಗೆ ಒಂದು ಯೋಜನೆಯನ್ನು ನೀಡಿದನು. "ನನ್ನ ಕುರಿಮರಿಗಳನ್ನು ಮೇಯಿಸು," "ನನ್ನ ಕುರಿಗಳನ್ನು ಕಾಯಿ," ಮತ್ತು "ನನ್ನ ಕುರಿಗಳನ್ನು ಮೇಯಿಸು" ಎಂಬ ಹೇಳಿಕೆಗಳಲ್ಲಿ ಅಪೊಸ್ತಲರು ಒಂದು ಸವಾಲನ್ನು ಸ್ವೀಕರಿಸಿದರು (ವಚನಗಳು 15-17). ಆದಿ ಸಭೆಯ ಕಾಲದಲ್ಲಿ ಪರಿಪೂರ್ಣವಾದ ದೇವರ "ಮಂದೆಗೆ" (ದೇವ ಜನರಿಗೆ)[45] ಅವರು ವಿಶೇಷ "ಕುರುಬರಾಗಿ" ಸೇವೆಸಲ್ಲಿಸಿದರು, ಹಾಗೂ ಸ್ಥಳೀಯ ಸಭೆಯಲ್ಲಿ ಪೇತ್ರನು (ಹಿರಿಯ ಅಥವಾ ಮೇಲ್ವಿಚಾರಕನಾಗಿ ಸೇವೆ ಸಲ್ಲಿಸಿದ್ದನು; ನೋಡಿ 1 ಪೇತ್ರ 5:1-4).

ಯೇಸು ಪೇತ್ರನಿಗೆ ನೀಡಿದ್ದ ಕರ್ತವ್ಯವನ್ನು ಅವನು ಈಡೇರಿಸಲು, ಅದಕ್ಕೆ ಬೆಲೆಯನ್ನು ತರಬೇಕಿತ್ತು. ಅವನು ರಕ್ತ ಸಾಕ್ಷಿಯಾಗಿ ಸಾಯಬೇಕಿತ್ತು. ಕ್ರಿಸ್ತನು ತನ್ನ ಅಪೊಸ್ತಲರಿಗೆ ಪಾಠವನ್ನು ಮುಂದುವರೆಸಿದನು:

> ಯೇಸು - ನನ್ನ ಕುರಿಗಳನ್ನು ಮೇಯಿಸು. ನಿನಗೆ ನಿಜನಿಜವಾಗಿ ಹೇಳುತ್ತೇನೆ, ನೀನು ಯೌವನಸ್ಥನಾಗಿದ್ದಾಗ ನೀನೇ ನಡುವನ್ನು ಕಟ್ಟಿಕೊಂಡು ಇಷ್ಟಬಂದ ಕಡೆಗೆ ತಿರುಗಾಡುತ್ತಿದ್ದಿ; ಆದರೆ ನೀನು ಮುದುಕನಾದಾಗ ನಿನ್ನ ಕೈಗಳನ್ನು ಚಾಚುವಿ, ಮತ್ತೊಬ್ಬನು ನಿನ್ನ ನಡುವನ್ನು ಕಟ್ಟಿಕೊಂಡು ನಿನಗೆ ಇಷ್ಟವಿಲ್ಲದ ಕಡೆಗೆ ನಿನ್ನನ್ನು ತೆಗೆದುಕೊಂಡು ಹೋಗುವನು ಎಂದು ಹೇಳಿದನು. ಅವನು ಎಂಥಾ ಸಾವಿನಿಂದ ದೇವರನ್ನು ಮಹಿಮೆಪಡಿಸುವನು ಎಂಬುದನು ಆತನು ಈ ಮಾತಿನಿಂದ ಸೂಚಿಸಿದನು. ಇದನ್ನು ಹೇಳಿ ಆತನು ಅವನಿಗೆ - ನನ್ನನ್ನು ಹಿಂಬಾಲಿಸು ಎಂದು ಹೇಳಿದನು![46] (ಯೋಹಾನ 21:17ಸಿ-19).

ಯೇಸುವಿನ ಮಾತಿನಲ್ಲಿ ಚಾಕಚಕ್ಯತೆಯಿತ್ತು: ವಚನ 18ರಲ್ಲಿ "ಕಟ್ಟುವ ವಿಚಾರವಿದೆ" ಅಂದರೆ ಅಪೊಸ್ತಲನ ಕೈಗಳನ್ನು ಕಟ್ಟಿ ಅವನ ವೈರಿಗಳು ಅವನನ್ನು ಕರೆದೊಯ್ಯುವ ವಿಚಾರವಾಗಿದೆ (ಹೋಲಿಕೆಯಾಗಿದೆ ಮಾರ್ಕ 15:1). ಪ್ರೇರಿತವಲ್ಲದ ಹೇಳಿಕೆಯ ಪ್ರಕಾರ, ಮೂವತ್ತನಾಲ್ಕು ವರ್ಷಗಳ ನಂತರ ಪೇತ್ರನು ತಲೆಕೆಳಗಾಗಿ ಶಿಲುಬೆಯ ಮರಣವನ್ನು ಹೊಂದಿದನು.[47] ಒಂದು ವೇಳೆ ಈ ವಿಚಾರವು ದೃಡಪಡದೆ ಹೋದರು ಯೋಹಾನ 21:18ರಂತೆ, ಪೇತ್ರನು ಕರ್ತನ ಮಾತನ್ನು ಈಡೇರಿಸುವ ಸವಾಲನ್ನು ಸ್ವೀಕರಿಸಿದ್ದರೆ, ತನ್ನ ನಂಬಿಕೆಯ ನಿಮಿತ್ತ ಮರಣವನ್ನು ಹೊಂದುವವನಿದ್ದನು.

ಪೇತ್ರನ ಪುನಶ್ಚೇತನಕ್ಕೆ ಪ್ರಯತ್ನಿಸಿದ, ಯೋಹಾನನಲ್ಲಿ[48] ಕಥೆಯು ಅಂತ್ಯಗೊಳ್ಳುತ್ತದೆ. ಪೇತ್ರನು ತಿರುಗಿಕೊಂಡು ಯೇಸುವಿಗೆ ಪ್ರಿಯನಾಗಿದ್ದ ಶಿಷ್ಯನು ಹಿಂದೆ ಬರುವದನ್ನು ಕಂಡನು (ಯೋಹಾನ 21:20), ಮತ್ತು "ಪೇತ್ರನು ಯೇಸುವಿನ ವಿಷಯವಾಗಿ ಏನು?" (ವಚನ 21). ಇನ್ನೊಂದು ಪದದಲ್ಲಿ ಹೇಳುವದಾದರೆ, ನಾನು ನನ್ನಲ್ಲಿಟ್ಟಿರುವ ನಂಬಿಕೆಯ ನಿಮಿತ್ತ ಮರಣವನ್ನು ಹೊಂದುತ್ತೇನೆ ಆದರೆ ಯೋಹಾನನ ಕುರಿತಾಗಿ ಏನು? ಅವನು ಸಹ ರಕ್ತ ಸಾಕ್ಷಿಯಾಗುವನೇ? ನಾನು ಬರುವವರೆಗೆ: "ಅವನು ಅದೇ ರೀತಿಯಲ್ಲಿ ಇರಬೇಕೆಂದು ನಾನು ಬಯಸಿದರೆ, ನಿನಗಾಗುವ ತೊಂದರೆ ಏನು? ಆದರೆ ನೀನು ನನ್ನನ್ನು ಹಿಂಬಾಲಿಸುವಿಯಷ್ಟೆ!" (ವಚನ 22). ಅವನಿಗೆ ಅಗತ್ಯವಿಲ್ಲದ ಸಂಗತಿಗಳ ಬಗ್ಗೆ ಪೇತ್ರನು ವಿಚಾರಿಸಬಾರದು ಎಂಬುದು ಕರ್ತನ ಚಿತ್ತವಾಗಿದೆ. ಆದರೆ ಪೇತ್ರನು ಅಂತ್ಯದವರೆಗೆ ಕರ್ತನನ್ನು ಹಿಂಬಾಲಿಸುವದರಲ್ಲಿ

ನಂಬಿಗಸ್ತನಾಗಿರಬೇಕಿತ್ತು.

ಇದರ ದೆಸೆಯಿಂದ “ಆ ಶಿಷ್ಯನು ಸಾಯುವದಿಲ್ಲವೆಂಬ ಮಾತು ಸಹೋದರರಲ್ಲಿ ಹೆಚ್ಚಿತು” (ವಚನ 23ಎ) - ಆದರೆ ಯೇಸುವಿನ ಮಾತಿನಲ್ಲಿ ಈ ಅರ್ಥವಿರಲಿಲ್ಲ (ವಚನ 23ಬಿ). ಪ್ರೇಲಿತವಲ್ಲದ ಹೇಳಿಕೆಯ ಪ್ರಕಾರ ಯೋಹಾನನು ಮಾತ್ರ ಸಹಜ ಮರಣವನ್ನು ಹೊಂದಿದ್ದನು. ಕ್ರಿ.ಶ. 90ರಲ್ಲಿ,[49] ಯೋಹಾನನು ತನ್ನ ಪತ್ರಿಕೆಯನ್ನು ಬರೆದಿರುವದಾದರೆ, ಅವನು 90 ವಯಸ್ಸಿನವನಿರಬಹುದು. ವಚನ 20ರಿಂದ 23ರಲ್ಲಿ ಅದರ ಸ್ಪಷ್ಟತೆಯನ್ನು ಕಾಣುತ್ತೇವೆ.

ಈ ಚರಿತ್ರಾ ಭಾಗವನ್ನು ದಾಖಲಿಸಿರುವದಿಲ್ಲ. ಈ ವಚನದ ಕುರಿತು ಒಂದು ಪ್ರಮುಖ ಪರಿಚಯವನ್ನು ಮಾಡಲಾಗಿದೆ: “[ಇದಕ್ಕೆ ಸಾಕ್ಷಿಯಾದ ಯೋಹಾನನೇ] ಯೋಹಾನನೇ ಈ ಭಾಗವನ್ನು ಬರೆದು, ಅವನು ಬರೆದಿರುವ ಸಾಕ್ಷಿಯು ಸತ್ಯವಾಗಿದೆ” (ವಚನ 24). ಭಾಷೆಯು ವಿಶಿಷ್ಟವಾಗಿದ್ದು,[50] ಸಂದೇಶವು ಸ್ಪಷ್ಟವಾಗಿದೆ: ಯೋಹಾನನು ಕ್ರಿಸ್ತನನ್ನು *ನೋಡಿ*ರುವದರಿಂದ, ಅವನ ಸಾಕ್ಷಿಯನ್ನು ನಂಬಬಹುದಾಗಿದೆ. ಕ್ರಿಸ್ತನು ನಿಜವಾಗಿಯು ಮರಣದಿಂದ ಎದ್ದು ಬಂದಿದ್ದಾನೆ!

## ಮುಕ್ತಾಯ

ಯೇಸು ಇನ್ನು ಬೇರೆ “ಎಷ್ಟೊ ಸೂಚಕಕಾರ್ಯಗಳನ್ನು” ತನ್ನ ಶಿಷ್ಯರ ಮುಂದೆ ಮಾಡಿದನು. (ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ) ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ (ಯೋಹಾನ 20:30, 31). ಮತ್ತಾಯ, ಮಾರ್ಕ, ಲೂಕ, ಹಾಗೂ ಯೋಹಾನನ ಸುವಾರ್ತೆಯ ಅಧ್ಯಯನದಿಂದ ನಿಮ್ಮ ನಂಬಿಕೆ ದೃಢವಾಗಿದೆ ಎಂದು ನಾನು ಭಾವಿಸುತ್ತೇನೆ. ಕ್ರಿಸ್ತನ ಜೀವನ ಚರಿತ್ರೆಯು ನಿಮ್ಮನ್ನು ಸ್ಪರ್ಷಿಸದಿದ್ದರೆ, ಬೇರೆ ಯಾವ ಸಂಗತಿಯು ನಿಮ್ಮನ್ನು ಮನಪರಿವರ್ತಿಸುತ್ತದೆ?[51]

## ಸೂಚನೆಗಳು

ಪಾಠದ ಎರಡು ಭಾಗದ, ಪ್ರಥಮ ಭಾಗ ಇದಾಗಿರುತ್ತದೆ. “ವಿದಾಯ - ಹಾಗೂ ಅಭಿನಂದನೆ” ಎಂಬುದು ನನ್ನ ಮುಂದಿನ ಪಾಠದ ಭಾಗವಾಗಿದೆ. ಪ್ರಸಂಗದ ಎರಡನೇ ಭಾಗದಲ್ಲಿ ಮುಂದುವರೆದ ಭಾಗವಾಗಿರುತ್ತದೆ: “ಮಹಿಮೆಗೆ ತೆಗೆಯಲ್ಪಟ್ಟನು” ಎಂಬುದು ಆತನ ಪರಲೋಕ ಆರೋಹಣದ ಪ್ರಸಂಗವಾಗಿದೆ. ಎರಡು ಭಾಗಗಳನ್ನು, ಪ್ರತ್ಯೇಕವಾದ ಭಾಗಗಳನ್ನಾಗಿ ಬೋಧಿಸುವದಾದರೆ, ಗಲಿಲಾಯ ಸಮುದ್ರದ ಬಳಿಯಲ್ಲಿ ಯೇಸು ಪ್ರತ್ಯಕ್ಷನಾದ ವಿಚಾರದ ಪ್ರಸಂಗವನ್ನು ಮಾಡಲು ನಾನು ಬಯಸುತ್ತೇನೆ. ಈ ಪ್ರಸಂಗವನ್ನು ನೀವು “ಮುಂಜಾನೆಯ ಉಪಹಾರವನ್ನು ಯೇಸು ತಯಾರಿಸಿದ ದಿನ” ಎನ್ನಬಹುದು. ಪೇತ್ರನ ಹಾಗೂ ಯೇಸುವಿನ ನಡುವಿನ ಅಂತರ್ ಸಂಭಾಷಣೆ. ಇದು ಸಹಜ ಆಯ್ಕೆಯಾಗಿದೆ.

“ತೋಮನ ಸ್ವಭಾವ” ಕುರಿತ ಪ್ರಸಂಗಮಾಡಬಹುದು. ಅವನನ್ನು ಪ್ರಪಂಚವು “ಸಂದೇಹದ ತೋಮ” ಎಂದು ಕರೆಯುತ್ತದೆ.[52] Prentice Meador's ಪ್ರಕಾರ, ಬಾಗಿಲು ಮುಚ್ಚಿದ ಕೊಠಡಿಯಲ್ಲಿದ್ದ ಶಿಷ್ಯರು: “ಮರಣಕ್ಕೆ ಭಯಪಡುವಾಗ, ನೀವು ಏನು ಮಾಡುವಿರಿ?”[53]

ಟಿಪ್ಪಣಿಗಳು

[1]ಸಬ್ಬತ್ ದಿನದಲ್ಲಿ ಆಗಿರುವ ಈ ಪ್ರತ್ಯಕ್ಷತೆ, ಯೋಹಾನ 20:19ರ ಮೇಲಿರುವ ವ್ಯಾಖ್ಯಾನ ನೋಡಿರಿ ನಂತರ ಈ ಅಭ್ಯಾಸದಲ್ಲಿ ನೋಡಿರಿ. [2]ಪಂಚಾಶತ್ತಮ ದಿನದ ಹಬ್ಬಕ್ಕಿಂತ ಐವತ್ತು ದಿನಗಳ ಮುಂಚೆ ಪಸ್ಕ ಹಬ್ಬವು ಇದ್ದಿತು. ಪಸ್ಕ ಹಬ್ಬದ ನಂತರ ಮತ್ತು ಆರೋಹಣವಾದ ನಂತರ ಯೇಸು ತನ್ನ ಶಿಷ್ಯರೊಂದಿಗೆ ನಲವತ್ತು ದಿನಗಳ ಕಾಲವಿದ್ದನು; ಪಂಚಶತ್ತಮ ದಿನಕ್ಕೆ ಮೊದಲು ಅಪೊಸ್ತಲರು ಇನ್ನು ಹತ್ತು ದಿನಗಳ ಕಾಲ ಕಾಯಬೇಕಿತ್ತು. [3]ಎರಡನೆಯ ಭಾಗದ ಅಧ್ಯಾಯದ ಮೊದಲನೆಯ ಭಾಗ ಇದಾಗಿದೆ. ಎರಡನೆಯ ಭಾಗವು ನಂತರ ಇದರ ಪುಸ್ತಕದಲ್ಲಿದೆ. [4]ನಿಜವಾಗಿಯು, ಯೋಹಾನ 20:19 ಹೇಳುತ್ತದೆ. ಯೋಹಾನನು ರೋಮನ್ನರು ಲೆಕ್ಕ ಹಾಕುವ ಸಮಯ ಉಪಯೋಗಿಸುತ್ತಿದ್ದನು ಎಂದು ವಾಕ್ಯವೇ ಬಲವಾದ ಆಧಾರವಾಗಿದೆ. ಅಧ್ಯಾಯ 19ರಲ್ಲಿ ಖಾಲಿಯಾದ ಸಮಾದಿ ಮತ್ತು ಮಗ್ದಲದ ಮರಿಯಳಿಗೆ ಕಾಣಿಸಿಕೊಂಡದ್ದು ಮತ್ತು ಅಪೊಸ್ತಲರಿಗೆ ಕಾಣಿಸಿಕೊಂಡಿರುವುದರ ಕುರಿತು ದಾಖಲಾಗಿದೆ. ಅಪೊಸ್ತಲರಿಗೆ ಕಾಣಿಸಿಕೊಂಡದ್ದು "ಸಾಯಂಕಾಲವಾಗಿರಬಹುದು ... ವಾರದ ಮೊದಲನೆಯ ದಿನ" ಇದು ಯೋಹಾನನು ರೋಮನ್ನರ ಲೆಕ್ಕವನ್ನು ಉಪಯೋಗಿಸಿದ್ದರೆ ಆಗಿರಬಹುದು. [5]ಯೇಸು ನಿರ್ದಿಷ್ಟವಾಗಿ ಮಧ್ಯರಾತ್ರಿ ಮತ್ತು ಸೂರ್ಯನು ಹುಟ್ಟುವ ಮಧ್ಯಾಂತರ ಸಮಯದಲ್ಲಿ ಎದ್ದು ಬಂದಿದ್ದಾನೆ, ಅದರಿಂದ "ವಾರದ ಮೊದಲನೆಯ ದಿನ" ಯೆಹೂದ್ಯರ ಲೆಕ್ಕಾಚಾರ ಇಲ್ಲವೆ ರೋಮನ್ನರ ಲೆಕ್ಕಚಾರ ಉಪಯೋಗ ಮಾಡಿರಬಹುದು. [6]ಯೇಸು ಪಸ್ಕಊಟ ಅವರೊಂದಿಗೆ ಮಾಡಿದನು ಅಲ್ಲಿ ಅವರು ಮೇಲಂತಸ್ತಿನಲ್ಲಿ ಹಿಂದಕ್ಕೆ ಉಳಿದುಕೊಂಡರು ಎಂದು ಕೆಲವರು ಯೋಚಿಸುತ್ತಾರೆ. [7]ಮಾರ್ಕ 16:14-19ರಲ್ಲಿ ಅನೇಕ ಘಟನೆಗಳಿವೆ: ಕಿಸ್ತನು ಅಪೊಸ್ತಲರಿಗೆ ಪ್ರಥಮ ಬಾರಿಗೆ ಕಾಣಿಸಿಕೊಂಡದ್ದು, ಉಪನಿಯೋಗ, ಆರೋಹಣ. ಮಾರ್ಕನ ಪ್ರಕಾರ ಈ ಮೂರು ಘಟನೆಗಳು ಒಂದರ ನಂತರ ಒಂದು ಬೇಗ ಬೇಗನೆ ಆಗಿರಬಹುದು ಎಂದು ತೋರುತ್ತದೆ; ಹಾಗಿದ್ದರೂ, ಇತರೆ ಸುವಾರ್ತೆಗಳಿಂದ ನಾವು ತಿಳಿದು ಕೊಂಡಿದ್ದೇವೆ ಬೇರೆ ಸುವಾರ್ತೆಯಲ್ಲಿ ಈ ಮೂರು ಘಟನೆಗಳು ನಡೆಯಲು ಕೆಲವು ಅವದಿಗಳು ತೆಗೆದುಕೊಂಡಿವೆ. [8]ಈ ಅಧ್ಯಾಯದಲ್ಲಿ ಚರ್ಚೆಯನ್ನು "ನಂಬಲು ಕಷ್ಟಪಟ್ಟರು" ಎಂಬ ಪಾಠವನ್ನು ಈ ಪುಸ್ತಕದ ಪ್ರಾರಂಭದಲ್ಲಿ ನೋಡಿರಿ. [9]ಮತ್ತಾಯ 14:26ನ್ನು ಅಪೊಸ್ತಲರ ಕೃತ್ಯಗಳು 12:15 ರೊಂದಿಗೆ ಹೋಲಿಸಿ. ಒತ್ತಡದ ಸಮಯದಲ್ಲಿ, ಹಳೆಯ ಮೂಡನಂಬಿಕೆಯ ಹೊರನೋಟ. [10]ಯೋಹಾನ 17:18ನ್ನು ನೋಡಿರಿ, ಇದು ನಿರಿಕ್ಷಣಾತ್ಮಕವಾಗಿದೆ.

[11]ಇದು ನಮಗಿಂತಲೂ ಶಿಷ್ಯರಿಗೆ ಬಹಳ ಸ್ಪಷ್ಟವಾಗಿರಬಹುದು, ಗ್ರೀಕ್ ಶಬ್ದವು "ಆತ್ಮ" (pneuma) ಅಂದರೆ "ಶ್ವಾಸ" ಎಂದರ್ಥ. [12]ಅವರಿಗೋಸ್ಕರ ಪವಿತ್ರಾತ್ಮನು ಏನು ಮಾಡಿದನು ಎನ್ನುವದರ ವಿಷಯವನ್ನು "ಕಡೇ ಗಳಿಗೆಯ ಏರ್ಪಾಟು" ಎಂಬ ಪಾಠ ಕುರಿತು *ಕ್ರಿಸ್ತನ ಜೀವನ ಚರಿತ್ರೆ, 6ನೇ* ಪುಸ್ತಕದಲ್ಲಿ ನೋಡಿರಿ. [13]ಯೋಹಾನ 20:23ರಲ್ಲಿರುವ ಭಾಷಾಪದವು ಮತ್ತಾಯ 16:19 ಮತ್ತಾಯ 18:18ಕ್ಕೆ ಸಮನಾಗಿದೆ. ಅಲ್ಲಿ ಮೊದಲು ಪರಲೋಕ ಮತ್ತು ನಂತರ ಭೂಮಿಯ ಮೇಲೆ ಎಂದು ತೆಗೆದುಕೊಳ್ಳಲಾಗಿದೆ. [14]ಇಬ್ರಿಯ ಶಬ್ದವು ಥೋಮ ಮತ್ತು ಗ್ರೀಕ್ ಶಬ್ದ ದೀದೂಮ ಅವೆರಡರ ಅರ್ಥ "ಅವಳಿ ಜವಳಿ" ಎಂದರ್ಥ ಥೋಮನಿಗೆ ಬಹುಶಃ ಸಹೋದರ ಅಥವಾ ಸಹೋದರಿ ಇರಬಹುದು. [15]ಯೋಹಾನ 17ರಲ್ಲಿ ತನ್ನ ಪ್ರಾರ್ಥನೆಯಲ್ಲಿ ಒಂದಾಗಿರುವದು, ಒಂದಾಗಿ ಮಾಡುವದು ಯೇಸು ಅಲ್ಲಿ ಬಿಂಬಿಸಿದ್ದಾನೆ (ಯೋಹಾನ 17:22, 23). ಪ್ರಾರ್ಥನೆ ಅದು ಎಲ್ಲಾ ವಿಶ್ವಾಸಿಗಳಿಗೆ: ಆದರೆ, ಆಗಿರಬಹುದು, ಅದು ಅಪೊಸ್ತಲರನ್ನು ಒಳಗೊಂಡಿದೆ. [16]NIVಯಲ್ಲಿ "ವಾರದ ನಂತರ" ಎಂದಿದೆ. ಈ ರೀತಿ ಯೋಹಾನನು ಸಮಯ ಸೂಚಿಸಿದ್ದಾನೆ, ಇದು ಬರುವ ವಾರದ ಮೊದಲನೆ ದಿನವಾಗಿರಬಹುದು. ಕೆಲವರು ಊಹಾಪೋಹ ಹೊಂದಿದ್ದಾರೆ ಅದೇನೆಂದರೆ ಯೇಸು ಅಪೊಸ್ತಲರಿಗೆ ಮೊದಲನೆಯ ದಿನದ ಕುರಿತು ಅವರ ಮೇಲೆ ಪ್ರಭಾವ ಬೀರುವುದೆ ಆಗಿತ್ತು - ಆ ದಿನವು ಮೂಲತಃ ದೇವರಿಗೆ ಮೀಸಲಾಗಿರುವ ದಿನ ಎಂಬಂತೆ ಹಳೆ ಒಡಂಬಂಡಿಕೆಯ ಹಳೆ ನಿಬಂದನೆಯ ಏಳನೆಯ ದಿನವನ್ನು ಸ್ಥಾನಪಲ್ಲಟ ಮಾಡಲಾಗಿದೆ. [17]Robert Duncan Culver, *The Life of Christ* (Grand Rapids, Mich.: Baker Book House, 1976), 277. ಕ್ರಿಸ್ತನ ದೈವತ್ವವು ಪೇತ್ರ ಮತ್ತು ಮಾರ್ಥಳ ಒಪ್ಪಿಸಿಕೊಡುವಿಕೆ, ಪಾಪನಿವೇದನೆಯ ಅರ್ಥವಾಗಿರುವಂಥದ್ದು (ಮತ್ತಾಯ 16:16; ಯೋಹಾನ 11:27). ಆದರೆ ಥೋಮನ ಪಾಪನಿವೇದನೆ ಸ್ಪಷ್ಟವಾಗಿತ್ತು. [18]ಕೆಲವು ಧಾರ್ಮಿಕ ಪ್ರತಿಪಾದಕರು ಯೇಸುವಿನ ದೈವತ್ವವನ್ನು ನಿರಾಕರಿಸುತ್ತಾರೆ. ಅವರು ಆತನು "ದೇವರಾಗಿದ್ದನು" ಆದರೆ "ಆತನೆ ದೇವರಲ್ಲ" ಎಂದು ಹೇಳುವರು. ಮೂಲ ಭಾಷೆಯಲ್ಲಿ ಥೋಮನು ಯೇಸುವಿಗೆ "ನನ್ನ ದೇವರೆ" ಎಂದನು. ಯೇಸುವೇ ದೇವರಾಗಿರದಿದ್ದರೆ, ಆತನು ಥೋಮನಿಗೆ ಗದರಿಸುತ್ತಿದ್ದನು ಆದರೆ ಆತನು ಥೋಮನಿಗೆ ಆಜ್ಞಾಪಿಸಿದ್ದಾನೆ. [19]J. W. McGarvey and Philip Y. Pendleton, *The Fourfold Gospel or A Harmony of the Four Gospels* (Cincinnati: Standard Publishing Co., 1914), 754.

[20]ಸ್ತ್ರೀಯರು ಸಮಾದಿಗೆ ಹೋಗಿರುವವರ ಸಂಖ್ಯೆ ಇದರಲ್ಲಿ ಸೇರಿದರು (ಮತ್ತಾಯ 28:5-8; ಲೂಕ 24:22, 23). ಅವರಿಗೆ ಕಾಣಿಸಿಕೊಳ್ಳುವದಕ್ಕಿಂತ ಮೊದಲೇ ಅವರು ನಂಬಿದರು (ಮತ್ತಾಯ 28:9, 10).

[21]ಯೋಹಾನ 20:30, 31ರ ವರೆಗೆ ಯೋಹಾನನ ಪುಸ್ತಕಕ್ಕೆ ಒಳ್ಳೆಯ ಮುಕ್ತಾಯ ಮಾಡಬಹುದಾಗಿತ್ತು. ಯೋಹಾನನು ಅಲ್ಲಿಗೆ ಮುಕ್ತಾಯ ಮಾಡಿದ್ದಾನೆಂದು ಹೇಳಲಾಗುತ್ತದೆ ಮತ್ತು 21ನೇ ಅದ್ಯಾಯವನ್ನು ತರುವಾಯ ಸೇರಿಸಲಾಗಿದೆ ಅದು ಯೋಹಾನನಿಂದ ಅಥವಾ ಇತರರಿಂದ ಸೇರಿಸಿರಬಹುದು. ಹಾಗಿದ್ದರೂ, ಯೋಹಾನ 21ನೇ ಹಸ್ತಪ್ರತಿಯು ಪ್ರಾರಂಭದಿಂದಲೂ ಅದು ಮೂಲ ಗ್ರಂಥದ ಭಾಗವಾಗಿದೆ ಎಂದು ಎಲ್ಲಾ ಹಸ್ತಪ್ರತಿಗಳ ಪುರಾವೆಗಳು ಹೇಳುತ್ತವೆ. ಯೋಹಾನ 20:30, 31ನ್ನು ಪೌಲನ ಸಹಜವಾದ ಮುಕ್ತಾಯಕ್ಕೆ ಹೋಲಿಸಬಹುದು (ನೋಡಿರಿ ಉದಾಹರಣೆಗಾಗಿ ಫಿಲಿಪ್ಪಿ 3:1 ಮತ್ತು 4:8), ಅದುವೆ ಎಲ್ಲಾ ಮುಕ್ತಾಯವಾಗಿರುವುದಿಲ್ಲ. ಯೋಹಾನ 20:30, 31ರ ವಾಕ್ಯಗಳು ಯೇಸುವಿನ ಸಹಜವಾದ ಅಳವಡಿಸಿಕೊಳ್ಳುವಿಕೆ ಮಾತುಗಳು ಯೋಹಾನ 20:29ರಲ್ಲಿ ಇರುತ್ತವೆ. [22]ಅಪೊಸ್ತಲರಿಗೆ ಗುಂಪಾಗಿ ಇರುವಾಗ ಯೇಸುವಿನ ದರ್ಶನ ಇದು ಮೂರನೆ ಸಾರಿ ಆಗಿರುತ್ತದೆ; ಆಗಿರಬಹುದು, ಆತನು ಇತರರಿಗೆ ವ್ಯಕ್ತಿಗತವಾಗಿ ಮತ್ತು ಚಿಕ್ಕಗುಂಪಾಗಿ ಇರುವಗಾಲೂ ಕಾಣಿಸಿಕೊಂಡಿದ್ದಾನೆ. [23]"ಗಲಿಲಾಯ ಸಮುದ್ರದ" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 2ನೇ* ಪುಸ್ತಕದಲ್ಲಿ ನೋಡಿರಿ. [24]ನತಾನಿಯೇಲ ಈತನು ಯೇಸುವಿನ ಮೊದಲ ಶಿಷ್ಯನಾಗಿದ್ದನು (ನೋಡಿರಿ ಯೋಹಾನ 1:43-51). "ನತಾನಿಯೇಲ"ನಿಗೆ ಇನ್ನೊಂದು ಹೆಸರು "ಬಾರ್ತಲೋಮಾಯ" ಇದ್ದಿತ್ತು ಎಂದು ಪ್ರಸ್ತಾಪಿಸಲಾಗಿದೆ, ಅವರು ಯೇಸುವಿನ ಹನ್ನೆರಡು ಶಿಷ್ಯರಲ್ಲಿ ಒಬ್ಬನಾಗಿದ್ದನು. ಅಂಶವೆನೆಂದರೆ ನತಾನಿಯೇಲನು ಅನೇಕ ಅಪೊಸ್ತಲರ ಪಟ್ಟಿಯಲ್ಲಿ ತೆಗೆದು ಕೊಳ್ಳಲಾಗಿದೆ, ಆ ಸಿದ್ದಾಂತಕ್ಕೆ ಸಮರ್ಥನಿಯವಾದ ಬೆಂಬಲಕೊಡುತ್ತದೆ. [25]ಯೋಹಾನನು ಹೇಳಿದಂತೆ "ಯೇಸು ಶಿಷ್ಯರಿಗೆ ಕಾಣಿಸಿಕೊಂಡದ್ದು ಮೂರನೆಯ ಸಾರಿ ಸ್ಪಷ್ಟವಾಗಿದೆ" (21:14), ಇತರೆ ಅಪೊಸ್ತಲರು ಅಲ್ಲಿಯೆ ಸಮಾಪದಲ್ಲಿಯೇ ಇದ್ದಿರುವ ಸಾದ್ಯತೆ ಇದೆ ಮತ್ತು ಉಪಹಾರಕ್ಕೆ ಏಳು ಜನ ಸೇರಿಕೊಂಡಿದ್ದರು. [26]ಯೇಸು ಸಮುದ್ರದಲ್ಲಿರುವಾಗ ಬೋಧಿಸಿದನು; ಆತನ ಹಿಂಬಾಲಕರಿಗೆ ಸಮುದ್ರದ ಹತ್ತಿರಕ್ಕೆ ಕರೆದನು; ಸಮುದ್ರವನ್ನು ಶಾಂತಗೊಳಿಸಿದನು; ಆತನು ಸಮುದ್ರದ ನೀರಿನ ಮೇಲೆ ನಡೆದನು. [27]McGarvey and Pendleton, 755. [28]ಆ ದೋಣಿ ಯಾರದ್ದಾಗಿತ್ತು? ಶಿಷ್ಯರು ಅದನ್ನು ಬಾಡಿಗೆಗೆ ತೆಗೆದುಕೊಂಡಿರಬಹುದು, ನನ್ನ ಊಹೆ ಏನೆಂದರೆ ಮೊದಲು ಮೀನು ಹಿಡಿಯುವವರು ಅವರ ಕುಟುಂಬದವರು ಅಲ್ಲಿರುವಾಗ ಈ ಮೀನು ಹಿಡಿಯುವ ಗಂಡಸರು ಆ ಎಲ್ಲಾ ಸಾಮಾನುಗಳನ್ನು ಅಲ್ಲಿ ಇಟ್ಟಿರಬಹುದು ಮತ್ತು ಅವುಗಳನ್ನು ಅವರಿಂದ ಪೇತ್ರ ಮತ್ತು ಆಂದ್ರೆಯನ ಕುಟುಂಬವಾಗಲಿ ಅಥವಾ ಯಾಕೋಬ ಮತ್ತು ಯೋಹಾನರ ಕುಟುಂಬವು ಎರವುಗೆ ತೆಗೆದುಕೊಂಡಿದ್ದರು. [29]ಗಲಿಲಾಯ ಸಮುದ್ರದಲ್ಲಿ ಮೀನುಗಳನ್ನು ಸಹಜವಾಗಿ ರಾತ್ರಿಯಲ್ಲಿ ಹಿಡಿಯುತ್ತಿದ್ದರು (ನೋಡಿ ಲೂಕ 5:5). [30]ಗ್ರೀಕ್‌ನಲ್ಲಿ ಎರಡನೂರು (cubits) ಮೊಳ, ಅಥವಾ ಅರ್ಧಗಜ ಎಂದು ಇದೆ (ನೋಡಿರಿ KJV) ಒಂದು cubit ಸುಮಾರಾಗಿ ಹೆಚ್ಚು ಕಡಿಮೆ ಒಂದು ಅಡಿ ಮತ್ತು ಅರ್ಧ ಅಡಿ, ಎರಡು ನೂರು cubits ಅಥವಾ ಮೂನ್ನೂರು ಅಡಿಗಳು ಅಥವಾ ಒಂದು ನೂರು ಗಜ ಆಗುತ್ತದೆ.

[31]ಮತ್ತೊಂದಾವರ್ತಿ ಯೇಸುವಿನ ಶಿಷ್ಯರು ಆತನನ್ನು ಗುರುತಿಸಲಿಲ್ಲ. ಇಲ್ಲಿ ಕೆಲವು ಅಂಶಗಳು ಇರುವ ಸಾದ್ಯತೆಗಳಿವೆ: ಆತನು ಅವರಿಂದ ಸ್ವಲ್ಪ ದೂರವಾಗಿದ್ದನು; ಅವರು ಆತನನ್ನು ಇನ್ನೂ ನಿರೀಕ್ಷೆ ಮಾಡಿರಲಿಲ್ಲ; ಆಗ ಹೆಚ್ಚಾಗಿ ಕತ್ತಲಿತ್ತು. [32]ಗ್ರೀಕ್‌ನ ಶಬ್ದವು ಉಪಯೋಗಿಸಿದ್ದು "ಮಕ್ಕಳಿಗಾಗಿ" ಅಲ್ಲ ಆದರೆ ಉಪಯೋಗಿಸಿದ್ದು "ಹುಡುಗರಿಗಾಗಿ" NIVನಲ್ಲಿ "ಸ್ನೇಹಿತರು" ಎಂದು ಹೊಂದಿರುತ್ತದೆ. [33]ಈ ಸಂಖ್ಯೆಗಳ ನಿರ್ದಿಷ್ಟತೆ ಅಸಾಧಾರಣವಾಗಿದೆ (ಸಾಮಾನ್ಯವಾಗಿ, ನಾವು ಸರಿಯಾದ ಸಂಖ್ಯೆಗಳನ್ನು ಕೊಟ್ಟಿದ್ದೆವೆ). ಬಹುಶಃ ಇದು "ಮಿನುಗಾರರ" ಕಥೆಯಲ್ಲವೆಂದು ನಾವು ತಿಳಿದುಕೊಳ್ಳಬೆಂಬುದು ಯೋಹಾನನ ಆಸೆಯಾಗಿತ್ತು, ಆದರೆ ಅವನು ಹಿಡಿದಿರುವದನ್ನು ಸರಿಯಾಗಿ ಲೆಕ್ಕ ಮಾಡಿದನು. ಒಂದು ಅಂಶವನ್ನು 11ನೇ ವಚನದಲ್ಲಿ ಹೇಳಿದ್ದಾನೆ. ಅದೇನೆಂದರೆ ದೊಡ್ಡದಾಗಿ ಹಿಡಿದರು ಸಹ ಬಲೆ ಹರಿಯಲಿಲ್ಲ. ಹಿಂದೆ ಅದ್ಭುತವಾಗಿ ಮೀನುಗಳು ಹಿಡಿದಿರುವಾಗ ಬಲೆಗಳು ಹರಿದು ಹೋಗಿದ್ದವು ಇದು ವ್ಯತ್ಯಾಸವುಳ್ಳದ್ದಾಗಿದೆ (ಲೂಕ 5:6). ಬಹುಶಃ ನಿಜವಾಗಿಯು ಬಲೆ ಹರಿಯಲಿಲ್ಲ ಈ ವಿವರಣೆಯು ಅದ್ಭುತದ ಒಂದು ಭಾಗವಾಗಿದೆ! [34]ಇಂಥಹದ್ದೆ ಒಂದು ಘಟನೆಯಲ್ಲಿ, ತಾವು ಹಿಡಿದ ಮೀನುಗಳ ನಿಮಿತ್ತ ವಿಸ್ಮಯ ಹಿಡಿದವರಾಗಿದ್ದರು (ಲೂಕ 5:9). [35]ಗ್ರೀಕ್ ಮೂಲ ಗ್ರಂಥದಲ್ಲಿ "ಬೆತ್ತಲೆ"ಯಾಗಿ ಎಂದು ಇದೆ (ನೋಡಿ KJV); ಆದರೆ ಕೆಲವು ಇಂಥಹ ಸಮಯಗಳಲ್ಲಿ "ಬೆತ್ತಲೆಯಾಗಿ" ಇಲ್ಲಿ ಅರ್ಥವು "ಸಾಕಷ್ಟು ಇಲ್ಲದ ಬಟ್ಟೆ ಧರಿಸಿರುವುದು." ಪೇತ್ರನು ತನ್ನ ಒಳಅಂಗಿ ಆತನಿಗೆ ಇದ್ದಿರಬಹುದು, ಆದರೆ ಆತನು ಕರ್ತನು ಬರುವಾಗ ಸಂಪೂರ್ಣ ಬಟ್ಟೆ ಹೊಂದಿರುವದು ಆತನು ಆಲೋಚಿಸಿರುವುದಿಲ್ಲ. [36]ನಮಗೆ

ಒಂದು ಸ್ಪಷ್ಟೋಕ್ತಿ ಇದೆ ನಾನು ಇಲ್ಲಿ ಇರುವೆ: "ನಿನ್ನ ಅಂಗಿಯನ್ನು ತೆಗೆದುಕೋ ಮತ್ತು ಕೆಲಸಕ್ಕೆ ಹೋಗು!" ಎಂಬ ನಾಣ್ಣುಡಿಯಿದೆ. [37]"ಚಿಕ್ಕ ದೋಣಿ" ಅವರು ಮೀನು ಹಿಡಿದಿರುವ ದೋಣಿ ಇದೆ ಆಗಿರಬಹುದು; ಆದರೆ ಕೆಲವು ಬರಹಗಾರರು ನಂಬುತ್ತಾರೆ ಅದೇನೆಂದರೆ ಮೀನುಗಾರರ ದೊಡ್ಡದಾದ ಪಾತ್ರೆಗೆ ಹಿಂದಿನಿಂದ ಸೆಣಬಿನ ಹಗ್ಗದಿಂದ ಒಂದು ಚಿಕ್ಕ ದೋಣಿ ಕಟ್ಟಿದ್ದಾರೆ, ಮತ್ತು ಅವರು ಚಿಕ್ಕ ದೋಣಿಯಲ್ಲಿ ಇಳಿದುಕೊಂಡಿದ್ದರು ಮತ್ತು ದಡಕ್ಕೆ ಸಂಚಾರ ಮಾಡಿದರು. [38]ಯೇಸು ಎಲ ರೊಟ್ಟಿ ಮತ್ತು ಮೀನನ್ನು ಪಡೆದುಕೊಂಡನು ಎಂದು ನಾವು ಹೇಳಲಿಲ್ಲ. [39]ವಚನ 12ರಲ್ಲಿ ಹೇಳುತ್ತದೆ ಅದೇನಂದರೆ "ಶಿಷ್ಯರಲ್ಲಿ ಯಾರೊಬ್ಬರು ಆತನಿಗೆ 'ನಿನು ಯಾರು?' ಎಂದು ಪ್ರಶ್ನಿಸುವ ಧೈರ್ಯಮಾಡಲಿಲ್ಲ" ಈ ಸನ್ನಿವೇಶದಲ್ಲಿ ಇದರ ಅರ್ಥವೇನೆಂದರೆ ಆತನು ಯಾರಾಗಿದ್ದನು ಎಂದು ಕೇಳುವದು ಅವರಲ್ಲಿ ಪ್ರತಿಯೊಬ್ಬರಿಗೂ ಅನವಶ್ಯಕವಾಗಿತ್ತು. ಉತ್ತರವು ಸ್ಪಷ್ಟವಾಗಿತ್ತು. ಕೆಲವರು ಕಟ್ಟಿಸಿಕೊಂಡಂತೆ ಶಿಷ್ಯರು ಭಯಗೊಂಡಿದ್ದರು ಗದರಿಸುವಿಕೆ ಸಮಾನವಾಗಿರುವದು ಯೋಹಾನ 14:9ರಲ್ಲಿ ಕೊಟ್ಟಿದೆ. [40]ವಚನ 20ರಲ್ಲಿ, ಯೋಹಾನನು "ಅವರನ್ನು ಹಿಂಬಾಲಿಸಿದನು" ಯೇಸು ಮತ್ತು ಪೇತ್ರನು ಇತರರಿಂದ ಅವರು ಹೊರಟು ಹೋದರು ಎಂದು ಹೇಳುತ್ತದೆ.

[41]"ಪ್ರೀತಿ" ಎಂಬ ಪದವು ಗ್ರೀಕ್‌ನಲ್ಲಿ ಇರುವ ಎರಡು ಪದಗಳು ಭಿನ್ನವಾಗಿವೆ ಎಂಬುದನ್ನು David L. Roper, *Getting Serious About Love* (Searcy, Ark.: Resource Publications, 1992), 20–27, 34, 35ರಲ್ಲಿ ಚರ್ಚಿಸಿದ್ದಾರೆ. [42]The Living Bible ಭಾವಾರ್ಥವು "ಹೌದು, ಕರ್ತನೆ ... ನಾನು ನಿಮ್ಮ ಸ್ನೇಹಿತನೆದು ನಿನಗೆ ತಿಳಿದಿದೆ." [43]*Agape* ಅಗಾಪೆ ಎಂಬ ಪದವು *agapao* ಆಗಾಪೊ ಪದದ ನಾಮಪದವಾಗಿದೆ. [44]Roper, 35. [45]ಅವರನ್ನು ದೇವರು ಯೇಸುವಿಗೋಸ್ಕರ ನೇಮಿಸಿದ ಪ್ರತಿನಿಧಿಗಳಾಗಿದ್ದಾರೆ "ಮುಖ್ಯ ಕುರುಬರು" (1 ಪೇತ್ರ 5:4). [46]ಯೇಸುವಿನ ಮೂಲ ಶರತ್ತು ಪೇತ್ರನಿಗೆ "ನನ್ನನ್ನು ಹಿಂಬಾಲಿಸು" ಎಂಬುದಾಗಿ ಇತ್ತು (ಮತ್ತಾಯ 4:19). ಅದು ಇಂದಿಗೂ "ನನ್ನನ್ನು ಹಿಂಬಾಲಿಸು!" (ಯೋಹಾನ 21:19, 22). ಈ ಶರತ್ತು ಇಂದಿಗೂ ಸಹ ಪ್ರತಿ ಗಂಡಸಿಗೂ ಮತ್ತು ಹೆಂಗಸಿಗೂ ಪ್ರತಿಯೊಬ್ಬ ಹುಡುಗ ಮತ್ತು ಹುಡುಗಿಗೆ ಜವಾಬ್ದಾರಿಯಾಗಿದೆ. [47]ಸಾಂಪ್ರದಾಯದ ಪ್ರಕಾರ ಪೇತ್ರನು ಆತನು ಶಿಲುಬೆ ಏರುವದು ಪೇತ್ರನಿಗೆ ಘನವುಳ್ಳವೆಂದೆ ಅನುಭವ ಪಡೆಯಲಿಲ್ಲ ಅದರಿಂದ ಆತನನ್ನು ಶಿಲುಬೆಗೆ ಹಾಕುವದಕ್ಕೆ ನಿರ್ಣಯಿಸಿದಾಗ ಪೇತ್ರನು ಮೇಲೆ ಕೆಳಗೆ ಆಗಿದ್ದನು. [48]ಪುನಃ ಅಲ್ಲಿ ಯೋಹಾನನು ತನ್ನನ್ನು ತಾನೇ "ಯೇಸು ತನ್ನನ್ನು ಪ್ರೀತಿಸಿದ" ಎಂದು ಹೇಳಿಕೊಳ್ಳುವ ಕಲ್ಪನೆ ಇದೆ. ಈ ಮೂಲ ಗ್ರಂಥದಲ್ಲಿ ಹಾಗಿದ್ದರೂ ಮುಂದೆ ಈ ಶಿಷ್ಯನು ಈ ಪುಸ್ತಕ ಬರೆದವನೆಂದು ಗುರುತಿಸಲ್ಪಡುತ್ತಾನೆ (ಯೋಹಾನ 21:24) - ಅಪೊಸ್ತಲರನಾದ ಯೋಹಾನನು ಇದರ ಗ್ರಂಥಕರ್ತನೆಂದು ನಮಗೆ ಭರವಸೆ ಇದೆ. [49]ನೋಡಿರಿ "ಯೋಹಾನನ ಪುಸ್ತಕ: ಕ್ರಿಸ್ತನು ದೇವರ ಮಗನು" ಎಂಬ ಪಾಠವನ್ನು *ಕ್ರಿಸ್ತನ ಜೀವನ ಚರಿತ್ರೆ, 1ನ್ನು* ಪುಸ್ತಕದಲ್ಲಿ ನೋಡಿರಿ. [50]ಮೂರನೆಯ ವ್ಯಕ್ತಿಯನ್ನು ಮೊದಲನೆ ವ್ಯಕ್ತಿಯೊಂದಿಗೆ ಸೇರಿಸಲಾಗಿದೆ, ಮತ್ತು ಏಕವಚನದೊಂದಿಗೆ ಬಹು ವಚನ ಸೇರಿಸಲಾಗಿದೆ. ಎಫೆಸದಲ್ಲಿರುವ ಸಭೆಯ ನಾಯಕರಿಂದ ಇದನ್ನು ಹೊಗಳಿಕೆಗಾಗಿ ಸೇರಿಸಲಾಗಿದೆ ಎಂದು ಕೆಲವರು ಯೋಚಿಸುತ್ತಾರೆ. ಯೋಹಾನನ ಪ್ರೇರೇಪಿಸಲ್ಪಟ್ಟ ಲೇಖನಿಯಿಂದ ತಂದೆ ಮಗ, ಪವಿತ್ರಾತ್ಮನು, ಅನುಮತಿಯ ಮುದ್ರೆಯನ್ನು ಬಹುಶಃ ಕೊಟ್ಟಿದ್ದಾರೆ ಎಂದು ನಾವು ಯೋಚಿಸುತ್ತೇವೆ.

[51]ಕೊನೆಯ ವಾಕ್ಯದ ಅಭ್ಯಾಸವು ನಿಮ್ಮ ತರಗತಿಯಲ್ಲಿ ಚರ್ಚಿಸಬಹುದಾದ ಚರ್ಚೆಯನ್ನು ಸೃಷ್ಠಿಮಾಡಿಸಿ ಉಪದೇಶಿಸಬೇಕು. ನಿಮ್ಮ ತರಗತಿಯಲ್ಲಿ ಯಾರಾದರೂ ಇನ್ನೂ ಯೇಸು ಕ್ರಿಸ್ತನು ದೇವರ ಮಗನೆಂದು ನಂಬದಿದ್ದರೆ, ಅವನ ಮತ್ತು ಅವಳಿಗೆ ಇರುವ ಅಡಚಣೆ ಏನು ಎಂದು ಕಂಡುಕೊಳ್ಳುವ ಸಮಯ ಇದಾಗಿದೆ - ಮತ್ತು ಅದಕ್ಕೆ ನೀವು ಮಾತಾಡಿರಿ. [52]Judsonia class (Francis Donnell) ಅವರ ತರಗತಿಯಲ್ಲಿ ಒಬ್ಬ ವಿದ್ಯಾರ್ಥಿಯು ಹೇಳಿದ್ದೇನೆಂದರೆ ಥೋಮನಿಗೆ ತಿಳಿಸಿ ಹೇಳಲು ಬಹಳ ಕಡಿಮೆ ಸಾಕ್ಷಿ ಆಧಾರಗಳು ಇತರೆ ಅಪೊಸ್ತಲರಿಗಿಂತ ಕಡಿಮೆ ಇದ್ದವು ಎಂದು ಹೇಳಿದನು: ಅವನು ಕರ್ತನನ್ನು ನೋಡುತ್ತಿದಂತೆಯೇ ತಕ್ಷಣವೇ ನಂಬಿದನು (ಯೋಹಾನ 20:27, 28), ಅವರಿಗೆ ಇನ್ನು ಹೆಚ್ಚಿನ ಆಧಾರವಾಗಿತ್ತು (ಲೂಕ 24:41-43). [53]Prentice A. Meador, Jr., *Sermons for Today,* vol. 2 (Abilene, Tex.: Biblical Research Press, 1981), 109–16.